ವಿಶ್ವವಾಣಿ

# ಸಮರ್ಪಣ್

ಪ್ರಾರ್ಥಿಸುವ ಹೃದಯಗಳಿಗೆ ಪ್ರೀತಿಯ ಪತ್ರಿಕೆ

ರೂ. 10/– | ಸಂಪುಟ 25 – ಸಂಚಿಕೆ 05 | ಮೇ 2024







## ಕರ್ತನಾದ ಯೇಸುಕ್ರಿಸ್ತನ ಸುವಾರ್ತೆ
## ನೆಡುವವನು ಯಾರು?
## ನೀರು ಹೊಯ್ಯುವವನು ಯಾರು?
## ಬೆಳೆಯಿಸುವವಸು ಯಾರು?

ಮೇ '24

ವಿಶ್ವವಾಣಿ ಸಮರ್ಪಣ್
ಪ್ರಾರ್ಥಿಸುವ ಹೃದಯಗಳಿಗೆ ಪ್ರೀತಿಯ ಪತ್ರಿಕೆ

This mission journal from Vishwa Vani is being published in Tamil, Malayalam, Telugu, Kannada, Marathi, Gujarati, Hindi, Odia, Bengali, English, Kokborok and Soura languages. Yearly Subscription: Rs. 100/-

**ಪ್ರಕಾಶಕರ ಕಾರ್ಯಾಲಯ :**
1-10-28/247, ಆನಂದಪುರಂ, ಕುಶಾಯಿಗುಡ,
ಇಸಿಐಎಲ್ ಪೋಸ್ಟ್, ಹೈದರಾಬಾದ್ - 500 062.
ದೂ: 040-27125557, ಫ್ಯಾಕ್ಸ್: 27126004,
ಈ-ಮೇಲ್: samarpan@vishwavani.org

**ರಾಜ್ಯ ಕಾರ್ಯಾಲಯ :**
24/2, ವಿಶ್ವವಾಣಿ, ಬೋರ್ ಬ್ಯಾಂಕ್ ರಸ್ತೆ,
ಬೆನ್ಸನ್ ಟೌನ್, ಬೆಂಗಳೂರು – 560 046.
ದೂರವಾಣಿ : 080-23333509.
ಈ-ಮೇಲ್: vishwavaninet@vishwavani.org

## ವಿಭಾಗಗಳು

02 ಆಲೋಚಿಸುವ ಅಂಶಗಳು
03 ಕಾರ್ಯ ನಿರ್ದೇಶಕರಿಂದ
07 ವಿಶೇಷ ಅಂಕಣ
12 ಪ್ರಾರ್ಥನೆ
14 ನೆಟ್‌ವರ್ಕ್ ಥೀಮ್ರ್ಣನ್ನರಿಂದ
20 ಕರ್ನಾಟಕ ರಾಜ್ಯ ಸಂಯೋಜಕರಿಂದ
22 ಸತ್ಯವೇದ ಅಧ್ಯಯನ
25 ಕ್ಷೇತ್ರ ಸಮಾಚಾರ
34 ಪ್ರಸ್ತುತ ಸುದ್ದಿ

### ಎಮಿಲ್ ಅಣ್ಣನವರ

# ಆಲೋಚಿಸುವ ಅಂಶಗಳು...

- ಸೇವೆ ಅಂದರೆ ಕೈಯಲ್ಲಿ ಸತ್ಯವೇದವು ಸೇವಕನು ಅಂದರೆ ಬಾಯಿಯಲ್ಲಿ ಯೇಸು! ಬಾಗದ ಹೊರತು ಜನರು ಸಸಿ ನೆಡಲು ಸಾಧ್ಯವಿಲ್ಲ. ತಗ್ಗಿಸಿಕೊಳ್ಳದ ಹೊರತು ಜನರು ಕೆಲಸ ಮಾಡಲು ಸಾಧ್ಯವಿಲ್ಲ.
- ಸಂಬಳವನ್ನು ಪರಿಗಣಿಸಿ ಜನರು ಸಸಿಗಳನ್ನು ನೆಡುವದಾದರೆ ಅದು ಸಂಸ್ಥೆಯೆನಿಸುವದು. ಜನರು ಸಂಬಳವನ್ನು ಪರಿಗಣಿಸಿ ನೆಡುವದಾದರೆ ಆಗ ಅದು ಸಂಸ್ಥೆಯೆನಿಸುವದು. ಜನರು ತಮಗೆ ಬರುವ ಪ್ರತಿಫಲವನ್ನು ಅಪೇಕ್ಷಿಸದೆ ನೆಡುವುದಾದರೆ ಆಗ ಅದು ಸಮಾಜವೆನಿಸುವುದು.
- ಸೇವಕರು ಚಿತ್ರದ ಮೇಲೆ ಚಿತ್ರ ಬರೆದಿದ್ದಾರೋ ಅಥವಾ ಯೇಸುವಿನ ಗಾಯಗಳನ್ನು ನೋಡಿದ್ದಾರೋ ಎಂಬದಾಗಿ ಸಮಯವೇ ತಿಳಿಸುವದು. ಬೇಡಿದಾಗ ಜನರು ಕೊಡುವಂಥದ್ದು ಭಿಕ್ಷೆಯಾಗಿದೆ. ಬೇಡದೆಯೇ ಜನರು ಕೊಡುವಂಥದ್ದು ಕಾಣಿಕೆಯಾಗಿದೆ.
- ವಾಕ್ಯವು ಬಿತ್ತಲ್ಪಟ್ಟರೆ ಸಭೆಯು ಎದ್ದೇಳುತ್ತದೆ. ವಾಕ್ಯವನ್ನು ಹಿಗ್ಗಿಸಿದರೆ ವೈರತ್ವವು ಉದ್ಭವಿಸುತ್ತದೆ.
- ಕೃಪೆಯಿಲ್ಲದೆಯೇ ಜನರು ನೆಡುವುದಿಲ್ಲ. ಪ್ರೀತಿಯಿಲ್ಲದೆಯೇ ಜನರು ನೀರು ಹೊಯ್ಯುವದಿಲ್ಲ.
- ನೀರು ಹಾಕದಿದ್ದರೆ ಬೆಳೆಗಳು ಒಣಗುತ್ತವೆ. ಕಣ್ಣೀರು ಹಾಕದಿದ್ದರೆ ಸೇವೆಯು ಒಣಗುತ್ತದೆ.

**ಕರ್ತನಾದ ಯೇಸುಕ್ರಿಸ್ತನ ಮಹಿಮೆಯುಳ್ಳ ಸುವಾರ್ತೆಯ ಮೂಲಕ ಭಾರತದ ಗ್ರಾಮಗಳು ಆಶೀರ್ವದಿಸಲ್ಪಡುವುದನ್ನು ಕಾಣುವುದಾಗಿದೆ**



# ಕಾರ್ಯನಿರ್ದೇಶಕರ ಪತ್ರ

ಕರ್ತನಲ್ಲಿ ಪ್ರಿಯರೇ, ಕಾಲಕಾಲಕ್ಕೆ ಬೆಳೆಯನ್ನು ಬೆಳೆಯುವಂತೆ ಮಾಡುವ ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೂ ನನ್ನ ವಂದನೆಗಳು.

**ನಿಮ್ಮನ್ನು ನೆನಪು ಮಾಡಿಕೊಂಡಾಗೆಲ್ಲಾ ನಾನು ಕರ್ತನನ್ನು ಸ್ತುತಿಸುವೆನು:** ಈ ಲೇಖನವನ್ನು ಬರೆಯುತ್ತಿದ್ದ ಹಾಗೆ ನಾನು ಫಿಲಿಪ್ಪಿಯವರಿಗೆ 1:2–6 ರ ಪ್ರಕಾರ, ಕ್ರಿಸ್ತನ ಮೇಲಿನ ನಿಮ್ಮ ಪ್ರೀತಿಯನ್ನೂ ನಿಮ್ಮ ಪ್ರಯಾಸವನ್ನೂ ಹಾಗೂ ನಿಮ್ಮ ಉದಾರವಾದ ದಾನಗಳನ್ನೂ ನೆನಪುಮಾಡಿಕೊಳ್ಳುವವನಾಗಿದ್ದೇನೆ. ನಿಮ್ಮ ಕುಟುಂಬವನ್ನು ಕರ್ತನಾದ ದೇವರು ಹೇರಳವಾಗಿ ಆಶೀರ್ವದಿಸುವಂತೆಯೂ ಪರೀಕ್ಷೆಗಳನ್ನು ಬರೆದು ಮುಂದಿನ ವ್ಯಾಸಂಗಕ್ಕೋಸ್ಕರ ಹೆಜ್ಜೆಗಳನ್ನಿಡುತ್ತಿರುವಂಥ ನಿಮ್ಮ ಮಕ್ಕಳ ವಿದ್ಯಾಭ್ಯಾಸವು ಉಜ್ವಲಗೊಳ್ಳುವಂತೆಯೂ, ಯೌವನ ಪ್ರಾಯದ ಮಕ್ಕಳಿಗೆ ಯೋಗ್ಯವಾದ ಬಾಳ ಸಂಗಾತಿಗಳು ದೊರೆಯುವಂತೆಯೂ, ಪ್ರಾರ್ಥಿಸುವವನಾಗಿದ್ದೇನೆ. ಅಷ್ಟು ಮಾತ್ರವಲ್ಲದೆ, ಯೋಗ್ಯವಾದ ಉದ್ಯೋಗಗಳಿಗಾಗಿಯೂ ಮತ್ತು ಬಡ್ತಿಗಾಗಿಯೂ ಎದುರುನೋಡುವವರು ಕರ್ತನ ಕೃಪೆಯನ್ನು ಹೊಂದುವಂತೆಯೂ ಕುಟುಂಬಸ್ಥರು ಒಳ್ಳೇ ಆರೋಗ್ಯವಂತರಾಗುವಂತೆಯೂ ಹಾಗೂ ಕುಟುಂಬದ ಆದಾಯವು ಸಂತೃಪ್ತಕರವಾಗಿರುವಂತೆಯೂ ಪ್ರಾರ್ಥಿಸುವವನಾಗಿದ್ದೇನೆ. ಕರ್ತನು ಯಾವ ಕೊರತೆಯೂ ಉಂಟಾಗತಂದೆ ನಮ್ಮ ಕುಟುಂಬವನ್ನು ಮುನ್ನಡೆಸುತ್ತಾನೆಂಬ ನಂಬಿಕೆಯಿಂದ ಮುಂದೆ ಸಾಗುವವರಾಗಿರಿ. ಕರ್ತನು ತಾನೇ ನಿಮ್ಮೆಲ್ಲರನ್ನೂ ಈ ಬೇಸಿಗೆಯ ಬಿಸಿಲಿನಿಂದ ತೊಂದರೆಪಡದ ಹಾಗೆ ಕಾಪಾಡುತ್ತಾ ಎಲ್ಲಾ ವಿಷಯಗಳಲ್ಲಿಯೂ ತೃಪ್ತರಾಗಿರುವಂತೆ ಸಹಾಯಮಾಡಲಿ.

**ಕ್ರಿಸ್ತನು ಬಲಪಡಿಸುವನು:** ಎಲ್ಲಾ ಪ್ರಾಂತ್ಯಗಳ ಎಲ್ಲಾ ಅಭಿವೃದ್ಧಿಯ ಸೇವಕರಿಗೂ ಕರ್ತನು ಫಿಲಿಪ್ಪಿ. 4:13 ರಲ್ಲಿ ತಿಳಿಸಿರುವ ದೇವರ ವಾಕ್ಯದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿ, ಹೊಸ ಹಣಕಾಸಿನ ವರ್ಷದ ಪ್ರಾರಂಭದಲ್ಲಿ ಸೇವಾ ಹಣಕಾಸಿನ ಗುರಿಯನ್ನು ಪ್ರಾರ್ಥನಾಪೂರ್ವಕವಾಗಿ ರೂಪಿಸಿದ್ದಕ್ಕಾಗಿ ನಾನು ಕರ್ತನನ್ನು ಸ್ತುತಿಸುವವನಾಗಿದ್ದೇನೆ. ಈ ಹಣಕಾಸಿನ ವರ್ಷದ ಗುರಿಯು 7000 ಹೊಸ ಗ್ರಾಮಗಳಿಗೆ ಸುವಾರ್ತೆಯನ್ನು ಸಾರುವದಾಗಿದೆ. ಅಭವೃದ್ಧಿ ಸೇವೆಯ ಪ್ರತಿನಿಧಿಗಳು ವಿಶ್ವಾಸಿಗಳ ಪ್ರತಿಯೊಂದು ಮನೆಯನ್ನೂ ಸಂಧಿಸುವರು. ಅವರ ಪ್ರಾರ್ಥನೆ ಹಾಗೂ ಹಣಕಾಸಿನ ಸಹಾಯವು ಮಿಷಿನರಿಗಳಿಗೆ ಗ್ರಾಮಗಳನ್ನು ಸುವಾರ್ತೆಯಿಂದ ತಲುಪಿಸಲು ಸಹಾಯ ಮಾಡುವವು. ದುರಾತ್ಮನ ಹಿಡಿತದಲ್ಲಿರುವ ಜನರು ಬಿಡುಗಡೆಗೊಳ್ಳುವರು. ಅಜ್ಞಾನವೆಂಬ ಅಂಧಕಾರವು ನಿವಾರಣೆಗೊಂಡು ನಿಜವಾದ ಬೆಳಕು ಹೊಳೆಯುವದು. ಮಹಾ ಸಂತೋಷವೂ ಹಾಗೂ ಸಮೃದ್ಧಿಯೂ ತುಂಬಿ ತುಳುಕುವವು. ಮಾನಸಾಂತರ ಹೊಂದುವವರ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಡುವವು ಹಾಗೂ ನೀವು ಶಾಸ್ವತವಾಗಿ ಸನ್ಮಾನಿಸಲ್ಪಡುವಿರಿ.

**ಮಿಷಿನರಿ ಕೆಲಸಕ್ಕೆ ದೇವರು ಸಹಾಯಕವಾಗಿರುವನು:** ಮಿಷಿನರಿ ಸೇವೆಯ ಅಭಿವೃದ್ಧಿ ಮತ್ತು ಸಮೃದ್ಧಿಯು ಪರಿಶುದ್ಧಾತ್ಮನ ಮೇಲೆ ಅವಲಂಬನೆಗೊಂಡಿರುವವು. ಹಾಗಾಗಿ ಯಾರೊಬ್ಬರಿಗೂ ಹೊಗಳಿಕೊಳ್ಳುವುದಕ್ಕೆ ಆಸ್ಪದವಿಲ್ಲ. 1 ಕೊರಿಂಥ 3:5 ಹೇಳುವದೇನೆಂದರೆ "ಅವರು ಸೇವಕರು; ಅವರ ಮುಖಾಂತರ ನೀವು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ". ಮುಂದುವರಿದು ಪೌಲನು, ಬೆಳೆಸುವ ದೇವರೇ ವಿಶೇಷವಾದವನು ಸೇವಕರಲ್ಲ ಎಂದು ತಿಳಿಸಿರುವನು. ನಾವು ದೇವರ ಜೊತೆ ಕೆಲಸದವರೆಂಬದನ್ನು ಯಾವತ್ತೂ ಮರೆಯದಿರೋಣ.

**1. ಸೇವೆಯಲ್ಲಿಯ ವೈವಿಧ್ಯತೆ:** ಮತ್ತಾಯ 13:1–9 ರ ವರೆಗಿನ ವಚನಗಳಲ್ಲಿ ಯೇಸು ವಿವಿಧ ಬಗೆಯ ಸೇವೆಗಳ ಬಗ್ಗೆ ತಿಳಿಸಿರುವನು. ಅ.ಪೌಲನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ (ಎಫೆಸ 4:11–13) 5 ಪ್ರಕಾರಗಳ ಸೇವೆಯ ಬಗ್ಗೆ ತಿಳಿಸಿರುವನು. ವ್ಯವಸಾಯಗಾರನು ಭೂಮಿಯನ್ನು ಉಳಿಮೆ ಮಾಡುತ್ತಾನೆ,

ಅವನ ಹಿಂದೆ ಇನ್ನೊಬ್ಬನು ಬೀಜವನ್ನು ಬಿತ್ತುತ್ತಾನೆ ಹಾಗೂ ಮತ್ತೊಬ್ಬನು ನೀರನ್ನು ಹಾಕುತ್ತಾನೆ. ಆದರೆ ಬೆಳೆಸುತ್ತಾ ಬರುವವನು ದೇವರು. ಪೌಲನು ಸಭೆಯನ್ನು ಮನುಷ್ಯನ ದೇಹಕ್ಕೆ ಹೋಲಿಕೆ ಮಾಡುವಾಗ ಅದನ್ನು ವಿವಿಧ ಅಂಗಗಳನ್ನಾಗಿ ವಿವರಿಸಿರುವನು. ವಿವರಿಸುವಾಗ ಬಹುತ್ವಕ್ಕೆ ಮಹತ್ವ ಕೊಟ್ಟಿರುವನು.

ವಿಶ್ವವಾಣಿ ಸೇವೆಯಲ್ಲಿಯೂ ನಾವು ಬಹುಮುಖಿ ಹಂತಗಳಾಗಿ ಕೆಲಸ ಮಾಡುವವರಾಗಿದ್ದೇವೆ. ಆದರೂ ನಮ್ಮ ಮುಖ್ಯ ಗುರಿಯು ಸುವಾರ್ತೆ ತಲುಪದ ಭಾರತದ ಗ್ರಾಮಗಳಿಗೆ ಸುವಾರ್ತೆಯನ್ನು ತಲುಪಿಸುವದೇ ಆಗಿದೆ.

**2. ಏಕತೆಯ ಉದ್ದೇಶ:** ನಾವು ಯಾವ ಸೇವೆಯನ್ನೇ ಮಾಡುವವರಾದರೂ ಅದು ಆತ್ಮಗಳ ಆದಾಯವನ್ನು ಮಾಡುವ ಸೇವೆ ಎಂಬದನ್ನು ಮನಸ್ಸಿನಲ್ಲಿರಿಸಿಕೊಳ್ಳತಕ್ಕದ್ದು. ಅಪೊಸ್ತಲನಾದ ಪೌಲನಾಗಲಿ, ಅಪೊಲ್ಲೋಸನಾಗಲಿ ಹಾಗೂ ಅಪೊಸ್ತಲನಾದ ಪೇತ್ರನಾಗಲಿ ತಮ್ಮೊಳಗೆ ಯಾವದೇ ಪೈಪೋಟಿಯನ್ನು ಹೊಂದಿರಲಿಲ್ಲ. ಅವರೆಲ್ಲರೂ ಕ್ರಿಸ್ತನ ನಾಯಕತ್ವದಲ್ಲಿ ತಮಗೆ ವಹಿಸಿದ ಕೆಲಸವನ್ನು ಪೂರ್ಣಗೊಳಿಸಿದರು. ಸೇವೆಯಲ್ಲಿ ಬೇರೆ ಬೇರೆ ವಿಧಾನಗಳಿದ್ದರೂ ಉದ್ದೇಶದಲ್ಲಿಯೂ ಹಾಗೂ ಆತ್ಮದಲ್ಲಿಯೂ ಐಕ್ಯತೆಯಿತ್ತು (1 ಕೊರಿಂಥ 3:7–10).

ವಿಶ್ವವಾಣಿಯ 9 ವಿಭಾಗಗಳಲ್ಲಿರುವ ಮಿಷಿನರಿಗಳೂ ಪ್ರಾರ್ಥನಾ ಗುಂಪಿನ ನಾಯಕರೂ ಹಾಗೂ ಸ್ವಯಂ ಪ್ರೇರಿತ ಪ್ರತಿನಿಧಿಗಳೆಲ್ಲರೂ ಒಂದೇ ಉದ್ದೇಶಕ್ಕಾಗಿ ಕೆಲಸ ಮಾಡುವವರಾಗಿದ್ದಾರೆ. ವಿವಿಧ ಸಭೆಗಳ ನಾಯಕರೊಂದಿಗೂ ಹಾಗೂ ಸಂಸ್ಥೆಗಳೊಂದಿಗೂ ನಾವು ಸುವಾರ್ತೆಯನ್ನು ಸಾರುವ ವಿಷಯದಲ್ಲಿ ಸಂಕೀರ್ಣ ವ್ಯವಸ್ಥೆಯವನ್ನು ಹೊಂದಿರುವೆವು.

**3. ಆತ್ಮದಲ್ಲಿ ದೀನತೆ:** ಸುವಾರ್ತಾ ಸೇವೆಯಲ್ಲಿ ನಮಗೆ ಮನುಷ್ಯರ ಸಹಾಯದ ಅವಶ್ಯಕತೆಯಿದೆ. ಆದರೆ ಅವರು ಬೆಳೆಸುತ್ತಾ ಬರುವವನು ದೇವರಾಗಿದ್ದಾನೆಂಬದನ್ನು ಮರೆತು ಹೊಗಳಿಕೊಳ್ಳುವವರಾಗಿದ್ದಾರೆ. ದೇವರಿಗೆ ಸಲ್ಲುವಂಥ ಗೌರವವನ್ನು ಮನುಷ್ಯರು ತೆಗೆದುಕೊಳ್ಳಬಾರದು. ಮನುಷ್ಯರಿಗೆ ತರಬೇಕಾದ ಸಂಬಳವನ್ನು ದೇವರೇ ಕೊಡುವನು. ಮನುಷ್ಯರು ತಮ್ಮ ಬಗ್ಗೆ ಏನು ಆಲೋಚಿಸುತ್ತಾರೋ ಅದು ಮುಖ್ಯವಲ್ಲ, ದೇವರು ಏನು ಹೇಳುತ್ತಾನೋ ಅದುವೇ ಮುಖ್ಯವು. ನಂಬಿಗಸ್ತನಾದ ಒಳ್ಳೇ ಆಳು ನೀನು ಎಂಬದಾಗಿ!

ಈಗಲೂ ಕೊಯ್ಯುವವನಿಗೂ ಕೂಲಿ ದೊರೆಯುವದು ಹಾಗೂ ನಿತ್ಯಜೀವಕ್ಕಾಗಿ ಫಲವನ್ನು ಕೂಡಿಸಿಡುತ್ತಾನೆ, ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವದು (ಯೋಹಾನ 4:36). ನಾವು ಆಳುಗಳು ಪ್ರಯೋಜನವಿಲ್ಲದವರು. ಮಾಡಬೇಕಾದದ್ದನ್ನೇ ಮಾಡಿದ್ದೇವೆ (ಲೂಕ 17:10). ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು (ಯೋಹಾನ 3:30). ನಾವು ಸಸಿಯನ್ನು ನೆಡುವವರೂ ಇನ್ನೊಬ್ಬರು ನೀರು ಹೊಯ್ಯುವವರೂ ಆಗಿದ್ದರೂ ಸುಗ್ಗಿಯ ಯಜಮಾನನಾದ ಯೇಸು ಕ್ರಿಸ್ತನೇ ಬೆಳೆಸುವವನಾಗಿದ್ದಾನೆ.

**ದರ್ಶನ ನೆರವೇರುವಿಕೆಯ ಸೇವೆಯಲ್ಲಿ ನಮಗೆ ಸಹಾಯ ಮಾಡಿರಿ:**

**1. ಸ್ವಯಂ ಪ್ರತಿನಿಧಿಗಳು, ಪ್ರಾರ್ಥನಾ ಗುಂಪಿನ ಮೇಲ್ವಿಚಾರಕರು:**

1) ಕ್ರಿಸ್ತೀಯ ಜೀವಿತದ ಭಾಗವಾಗಿರುವ ಪ್ರಾರ್ಥನೆ ಮಾಡುವ ಹಾಗೂ ದೇವರ ವಾಕ್ಯ ಓದುವ ಜನರು ನಮಗೆ ಅವಶ್ಯವಾಗಿರುವರು.

2) ಜಾತಿ, ಮತ, ಸಭೆ ಹಾಗೂ ಪಂಗಡ ಎಂಬದನ್ನು ನೋಡದೆ ಸೇವೆಯಲ್ಲಿ ಪಾಲು ತೆಗೆದು ಕೊಳ್ಳುವದು ಅವಶ್ಯವಾಗಿರುವದು.

3) ಜೊತೆಯಾಗಿ ಪ್ರಾರ್ಥನೆ ಮಾಡುವದರ ಮೂಲಕ, ನಿಮ್ಮ ಪ್ರಾಂತ್ಯಗಳಲ್ಲಿರುವ ಸೇವಾದಾನಿಗಳ ಮನೆಗಳನ್ನು ಸಂಧಿಸಿ ಅವರು ಕೊಡುವ ದೇಣಿಗೆಯನ್ನು ಸಂಗ್ರಹಿಸಿಕೊಂಡು ರಸೀದಿಯನ್ನು ಕೊಡುವದರ ಮೂಲಕ ಹಾಗೂ ವಿಶ್ವಾಸಿಗಳನ್ನು ಆತ್ಮೀಕವಾಗಿ ಬೆಳೆಸುವದರ ಮೂಲಕ ಸೇವೆಗೆ ಸಹಾಯ ಮಾಡಬಹುದು.

4) ಸೇವಾ ನೆರವೇರುವಿಕೆಯ ಯೋಜನೆಯಲ್ಲಿ ಯೌವನಸ್ಥರು ಹಾಗೂ ಯೌವನಸ್ಥೆಯರು ಸ್ವಯಂ ಪ್ರೇರಿತರಾಗಿ ಮುಂದೆ ಬರುವಂತೆ ಆಮಂತ್ರಿಸುವವರಾಗಿದ್ದೇವೆ.

## 2. ಸೇವೆಯ ಮೇಲ್ವಿಚಾರಣೆ:

1) ನಾವು ಕೊಡುವ ಉಚಿತವಾದ ಉಳಿತಾಯ ಪೆಟ್ಟಿಗೆಯನ್ನು ಪಡೆದುಕೊಂಡು ಪ್ರತಿದಿನ ಸೇವೆಗಾಗಿ ಪ್ರಾರ್ಥಿಸುತ್ತಾ ಉಳಿತಾಯ ಪೆಟ್ಟಿಗೆಯಲ್ಲಿ ನಿಮ್ಮ ಕಾಣಿಕೆಯನ್ನು ಶೇಖರಿಸಿ ಆರು ತಿಂಗಳಿಗೊಮ್ಮೆ ಕೊಡುವದರ ಮೂಲಕ ಸೇವಾ ಪಾಲುಗಾರರಾಗಬಹುದು.

2) ವಾರ್ಷಿಕ ನೂರು ರೂಪಾಯಿಗಳನ್ನು ಚಂದಾ ಕೊಡುವದರ ಮೂಲಕ ಸಮರ್ಪಣ್ ಮಾಸ ಪತ್ರಿಕೆಗೆ ಸಹಾಯ ಮಾಡಬಹುದು.

3) ತಿಂಗಳಿಗೊಮ್ಮೆ ರೂ. 4000 ನ್ನು ಕೊಡುವುದರ ಮೂಲಕ ಸುವಾರ್ತಾ ಪ್ರಸಾರಕ್ಕೆ ಸಹಾಯ ಮಾಡಬಹುದು.

4) ಸಭಾಕಟ್ಟಡಗಳ ನಿರ್ಮಾಣಕ್ಕೋಸ್ಕರ ಧಾರಾಳವಾಗಿ ಕೊಡುವದರ ಮೂಲಕ ಸೇವಾ ಕೊರತೆಯನ್ನು ನೀಗಿಸಬಹುದು.

5) ಸೇವೆಗೋಸ್ಕರ ಪ್ರಾರ್ಥಿಸುಪಂಥ ಹಾಗೂ ಸಹಾಯ ಮಾಡುವಂಥ ಹೊಸ ಕುಟುಂಬಗಳನ್ನು ಸಂಸ್ಥೆಗೆ ಪರಿಚಯಿಸಬಹುದು.

## 3. ಪೂರ್ಣಾವಧಿ ಅಭಿವೃದ್ಧಿ ಸೇವಕರು:

1) 12ನೇ ತರಗತಿ ತೇರ್ಗಡೆ ಹೊಂದಿದವರೂ 30 ವರ್ಷಗಳ ವಯೋಮಿತಿ ಒಳಗಿದ್ದು, ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡು ಪೂರ್ಣಾವಧಿ ಸೇವೆಗೆ ಕರೆಯಿದ್ದು ನಂಬಿಗಸ್ತರಾಗಿ ಕರ್ತನ ಸೇವೆ ಮಾಡುವವರು ನಮಗೆ ಬೇಕಾಗಿದ್ದಾರೆ.

2) ಸ್ಥಳೀಯ ಸೇವಕರ, ಭಾರತೀಯ ದಾನಿಗಳ ಹಾಗೂ ಪ್ರಾರ್ಥನಾ ವೀರರ ಸಹಾಯಗಳಿಂದ ಒಮ್ಮೆಯೂ ಯೇಸುವಿನ ನಾಮವನ್ನು ಅರಿಯದಿರುವಂಥ ಗ್ರಾಮಗಳಲ್ಲಿ ಯೇಸುವಿನ ನಾಮವನ್ನು ಅರಿಯುವಂತೆ ಮಾಡಿ ಸಭೆಯ ಗಂಟೆಯ ನಾದವನ್ನು ಕೇಳಿಸುವಂತೆ ಮಾಡುವ ದರ್ಶನವು ನಮ್ಮದಾಗಿರುವದು.

3) ಅಭ್ಯರ್ಥಿಯು ತಂಡದ ಮೇಲೆ ಆಧಾರಿತನೂ ಕಠಿಣವಾಗಿ ಶ್ರಮಿಸುವವನೂ ಹಾಗೂ ಕ್ರಿಸ್ತನಿಗಾಗಿ ಆತ್ಮಗಳನ್ನು ಗೆಲ್ಲುವವನೂ ಆಗಿರುತಕ್ಕದ್ದು.

4) ಜೊತೆ ಸೇವಕರೊಂದಿಗೂ, ಸೇವಾ ಪ್ರತಿನಿಧಿಗಳೊಂದಿಗೂ ಹಾಗೂ ಸಭೆಯ ಹಿರಿಯರೊಂದಿಗೆ ಆರೋಗ್ಯಕರ ಸಂಬಂಧವನ್ನು ಹೊಂದಿರುವಂಥದ್ದು ಅವಶ್ಯವಾಗಿರುವದು. ಅಷ್ಟು ಮಾತ್ರವಲ್ಲದೆ, ತಾನು ಸಂಗ್ರಹಿಸುವಂಥ ದೇಣಿಗೆಯನ್ನು ಪ್ರಧಾನ ಕಛೇರಿಗೆ ನಂಬಿಗಸ್ತರಾಗಿ ಒಪ್ಪಿಸುವವ ರಾಗಬೇಕು.

## 4. ಸೇವಾ ದರ್ಶನವುಳ್ಳ ಸಭೆ:

1) ಆರಾಧನೆಯ ಸಮಯದಲ್ಲಿ ಸೇವೆಯ ಕಾರ್ಯಗಳನ್ನು ಹಂಚಿಕೊಳ್ಳುವದಕ್ಕೆ ಅವಕಾಶಗಳನ್ನು ಕೊಡುವದು.

2) ಉತ್ತರ ಭಾರತದ ಸೇವಾಕ್ಷೇತ್ರಗಳನ್ನು ಸಂಧಿಸುವದರ ಮೂಲಕ, ಯೌವನಸ್ಥರಿಗೆ ಸೇವೆಯಲ್ಲಿ ಪಾಲು ತೆಗೆದುಕೊಳ್ಳಲು ಪ್ರೋತ್ಸಾಹಮಾಡುವದು.

3) ಕ್ಷೇತ್ರಗಳ ಸೇವೆಗಾಗಿ ಭಾರವುಳ್ಳವರಾಗಿ ಪ್ರಾರ್ಥಿಸುತ್ತಾ ಸೇವೆಗೆ ಪ್ರತಿ ತಿಂಗಳೂ ಸಹಾಯ ಮಾಡುವದು.

4) ಸಭಾಕಟ್ಟಡಗಳಿಲ್ಲದ ಸ್ಥಳಗಳಲ್ಲಿ ವಿಶ್ವಾಸಿಗಳು ತಮ್ಮ ಕುಟುಂಬದ ಅಥವಾ ಸಭೆಯ ಪರವಾಗಿ ಸಭಾಕಟ್ಟಡಗಳನ್ನು ನಿರ್ಮಿಸಿ ಕೊಡುವದು.

5) ವ್ಯಕ್ತಿಗತವಾಗಿ ಸುವಾರ್ತೆಯನ್ನು ಹಂಚಿಕೊಳ್ಳುವುದಕ್ಕಾಗಿ ಯೌವ್ವನಸ್ಥರನ್ನು ಪೂರ್ಣಾವಧಿ ಸೇವೆ ಮಾಡಲು ಪ್ರೋತ್ಸಾಹಿಸುವದು.

ಪ್ರಿಯರೇ, ಕರ್ತನ ಅತ್ಯಂತ ಶ್ರೇಷ್ಠವಾದ ಅಪ್ಪಣೆಯಾದ ಸುವಾರ್ತೆ ಸಾರುವ ವಿಷಯದಲ್ಲಿ ಕರ್ತನು ನಿಮ್ಮನ್ನು ಪ್ರೇರೇಪಿಸುವದಾದರೆ ದಯಮಾಡಿ ನಮ್ಮನ್ನು ಸಂಪರ್ಕಿಸಿ.

ಸುವಾರ್ತೆ ತಲುಪದ ಗ್ರಾಮಗಳಿಗೆ ಸುವಾರ್ತೆ ತಲುಪಿಸುವದಕ್ಕಾಗಿ ಹೊಸ ಎಜ್ರರು (ಸೇವಕರು) ಹೊರಟು ನಿಂತಿರುವವರು: ಗುಜರಾತ ಹಾಗೂ ಆಂಧ್ರ ಪ್ರದೇಶಗಳ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಪೂರ್ಣಗೊಳಿಸಿರುವಂಥ 45 ಯುವ ಮಿಷಿನರಿಗಳು ಕರ್ತನ ಕೃಪೆಯಿಂದ 225 ಹೊಸ ಗ್ರಾಮಗಳನ್ನು ಸಂಧಿಸಲು ಹೊರಟು ನಿಂತಿರುವವರು. ಅವರು ಸೇವೆ ಸಲ್ಲಿಸುವಂಥ ಗ್ರಾಮಗಳನ್ನು ದತ್ತು ತೆಗೆದುಕೊಂಡು ಗ್ರಾಮವೊಂದಕ್ಕೆ ಪ್ರತಿ ತಿಂಗಳೂ 4000/– ರೂ.ಗಳನ್ನು ಕೊಡುವ ಕುಟುಂಬಗಳು ಹಾಗೂ ವಿಶ್ವಾಸಿಗಳು ನಮಗೆ ಅವಶ್ಯವಾಗಿರುವರು. ಮುಂದಿನ ಹಂತದಲ್ಲಿ ಉತ್ತರ ಭಾರತ, ವಾಯುವ್ಯ ಭಾರತ ಹಾಗೂ ಒಡಿಷಾ ರಾಜ್ಯದಲ್ಲಿ ತರಬೇತಿಯು ಪ್ರಾರಂಭವಾಗುವಂತೆ ಪ್ರಾರ್ಥಿಸಿರಿ.

**ವಿಶ್ವವಾಣಿ ಮಕ್ಕಳ ರಜಾಕಾಲದ ಸತ್ಯವೇದ ಶಾಲೆಗಳು:** 3277 ಆರಾಧನಾ ಕೇಂದ್ರಗಳಲ್ಲಿ ಹಾಜರಾಗುತ್ತಿರುವಂಥ 26,504 ಮಕ್ಕಳಿಗೆ ನಾವು ರಜಾಕಾಲದ ಸತ್ಯವೇದ ತರಗತಿಗಳನ್ನು ನಡೆಸುವವರಾಗಿದ್ದೇವೆ. ಒಂದು ಮಗುವಿಗೆ 150/– ರೂಪಾಯಿಗಳಂತೆ, ಅವರಿಗೆ ಬೇಕಾದ ಪುಸ್ತಕ, ಬರೆಯುವ ಸಾಮಗ್ರಿ ಹಾಗೂ ಆಹಾರ ಪದಾರ್ಥಗಳನ್ನು ಪೂರೈಸುವದಕ್ಕೋಸ್ಕರ ಈ ರಜಾಕಾಲದ ಸತ್ಯವೇದ ಶಾಲೆಗೆ ಒಟ್ಟು 40 ಲಕ್ಷಗಳ ಅವಶ್ಯಕತೆಯಿದೆ. ಈ ಸೇವೆಗೆ ಸಹಾಯ ಮಾಡಲು ದಯಮಾಡಿ ಮುಂದೆ ಬನ್ನಿರಿ.

**ಚುನಾವಣೆಗಳು:** ನಂಬಿಗಸ್ತರಾದ ನಾಗರೀಕರೂ ಹಾಗೂ ವಿಶ್ವಾಸಿಗಳೂ ಆದ ನಾವು ಮಾಡುವ ಪ್ರಾರ್ಥನೆಯ ನಾಯಕರಾಗುವವರಿಗೆ ದೇವರು ಯೋಸೇಫನಂಥ ಹೃದಯವನ್ನು ಅನುಗ್ರಹಿಸಲಿ ಎಂಬದಾಗಿರಬೇಕು. ಮೊರ್ದೆಕೈಯ ಹಾಗೂ ಎಸ್ತೇರಳ ಪ್ರಾರ್ಥನೆಗಳಿಗೆ ಉತ್ತರಿಸಿದ ಕರ್ತನು ನಮ್ಮ ಪ್ರಾರ್ಥನೆಗಳಿಗೂ ಉತ್ತರಿಸುವವನಾಗಲಿ. ಕರ್ತನು ತನ್ನ ಚಿತ್ತವನ್ನು ಪೂರ್ಣ ಪ್ರಮಾಣದಲ್ಲಿ ನೆರವೇರಿಸುವವನಾಗುವಂತೆ 4 ರಂದು ಫಲಿತಾಂಶ ಬರುವವರೆಗೂ ಉಪವಾಸದಿಂದಲೂ ಕಣ್ಣೀರಿನಿಂದಲೂ ಪ್ರಾರ್ಥಿಸುವವರಾಗೋಣ.

**ವಂದನೆಗಳು ಹಾಗೂ ಧನ್ಯವಾದಗಳು:**

1. ವಿಶ್ವವಾಣಿ ಸೇವೆಗೋಸ್ಕರ ಪ್ರಾರ್ಥನೆ ಮಾಡುವವರಿಗೂ ಕೊಡುವವರಿಗೂ ದೇಣಿಗೆ ನೀಡುವವರಿಗೂ ನನ್ನ ವಂದನೆಗಳು.
2. ಈ ವರ್ಷದ ಪಾವನ ದಿನಗಳಲ್ಲಿಯೂ ಹಾಗೂ ಆರಾಧನಾ ದಿನಗಳಲ್ಲಿಯೂ ತಮ್ಮ ಸಭೆಗಳಲ್ಲಿ ದೇವರ ವಾಕ್ಯವನ್ನು ಹಂಚಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸಭಾಪಾಲಕರಿಗೂ ನಾಯಕರಿಗೂ ಪ್ರತಿನಿಧಿಗಳಿಗೂ ಹಾಗೂ ಮಿಷಿನರಿಗಳಿಗೂ ನಾನು ವಂದಿಸುವವನಾಗಿದ್ದೇನೆ.
3. ಸೇವೆಗೆ ಸಂಬಂಧಿಸಿದ ಅವಶ್ಯಕತೆಗಳಿಗಾಗಿಯೂ ಸಭಾಕಟ್ಟಡಗಳಿಗಾಗಿಯೂ ಮತ್ತು ಕಛೇರಿ ಕಟ್ಟಡಗಳಿಗಾಗಿಯೂ ದೇಣಿಗೆ ಕೊಟ್ಟಂಥವರೆಲ್ಲರಿಗೂ ನಾನು ವಂದಿಸುಸವನಾಗಿದ್ದೇನೆ.

ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ. ಸೇವೆಗೋಸ್ಕರ ಸತತವಾಗಿ ಪ್ರಾರ್ಥಿಸಿರಿ. ನಾವು ಸಹ ನಿಮಗೋಸ್ಕರ ಪ್ರಾರ್ಥಿಸುವೆವು.

**"ಹೀಗಿರಲಾಗಿ ಯೂದಾಯ ಗಲಿಲಾಯ ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತು ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ ನಡೆದು ಪವಿತ್ರಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು." (ಅ.ಕೃ. 9:31).**

12.04.2024 | ಕ್ರಿಸ್ತನಲ್ಲಿ ನಿಮ್ಮ ಸಹೋದರ
ಚೆನ್ನೈ – 53 | **ಘನ. ಡಾ. ಡಬ್ಲ್ಯು. ವಿಲ್ಸನ್ ಜ್ಞಾನಕುಮಾರ**

2009ರ ಮೇ ತಿಂಗಳಲ್ಲಿ ಎಮಿಲ್ ಅಣ್ಣನವರು ಬರೆದ ವಿಶೇಷ ಅಂಕಣವನ್ನು ಮರುಪ್ರಕಟಿಸಲಾಗಿದೆ.

# ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆ

## ನೆಡುವವನು ವಿಶೇಷವಾದವನು,
## ನೀರು ಹೊಯ್ಯುವವನು ಬಹು ವಿಶೇಷವಾದವನು,
## ಬೆಳೆಯಿಸುವವನು ಅತ್ಯಂತ ವಿಶೇಷವಾದವನು!

ಅತ್ಯಂತ ಪ್ರಿಯರಾದವರೇ,

ಈ ಅಂಕಣವನ್ನು ಓದುವವರಾದ ನಿಮಗೆ ನನ್ನ ವಂದನೆಗಳು. ಎಲ್ಲಾ ದಿಕ್ಕುಗಳ ಜನರು ಸುವಾರ್ತೆಯನ್ನು ತಿಳಿದುಕೊಂಡು ಅದನ್ನವರು ಅಂಗೀಕರಿಸಿಕೊಳ್ಳಬೇಕೆಂಬ ಅಪೇಕ್ಷೆಯನ್ನು ನಿಮ್ಮ ಹೃದಯಗಳಲ್ಲಿ ನೆಲೆಗೊಳಿಸಿರುವ ಕ್ರಿಸ್ತ ಯೇಸುವಿನಲ್ಲಿ ಹರ್ಷಪಡುತ್ತಿರುವ ಜನರಲ್ಲಿ ನೀವೂ ಒಬ್ಬರಾಗಿರುವಿರೆಂದು ನಾನು ಭಾವಿಸುತ್ತೇವೆ. ಆದದರಿಂದಲೇ ನಿಮ್ಮೊಂದಿಗೆ ನಾನು ಮೇಲೆ ತಿಳಿಸಿರುವ ಶಿರೋನಾಮೆಯಂತೆ ದೇವರ ವಾಕ್ಯವನ್ನು ಹಂಚಿಕೊಳ್ಳಲು ಬಯಸುತ್ತೇನೆ.

> ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯು ಮಹಾ ಪ್ರಾಮುಖ್ಯವಾದದ್ದೆಂದು ತಿಳಿದಿರುವವರಾದ ಜನರು, ಒಬ್ಬಮನುಷ್ಯನ ಜೀವಿತಕ್ಕೆ ಅದು ಅರ್ಥವುಳ್ಳದ್ದೂ ಹಾಗೂ ಆಶೀರ್ವಾದಕರವಾದದ್ದೂ ಎಂಬದಾಗಿ ಆ ಸುವಾರ್ತೆಯನ್ನು ಸಾರುವವಾರಗಲು ಮುಂದೆ ಬರುತ್ತಾರೆ. ಸತ್ಯವೇದವು ಅಂಥವರಿಗೆ ಎರಡು ಭಾಗಮಾಡಿರುವದು. ಸುವಾರ್ತೆ ಸಾರುವಂಥವರಿಗೆ ಮೊದಲನೇದಾಗಿ ಸಸಿ ನೆಡುವವರು ಇವರು ವಿಶೇಷವಾದವರಾಗಿದ್ದಾರೆ. ಎರಡನೇದಾಗಿ, ನೀರು ಹೊಯ್ಯುವವರು ಇವರು ಬಹು ವಿಶೇಷವಾದವರಾಗಿದ್ದಾರೆ ಎಂಬದಾಗಿ. ಹೌದು, ಸುವಾರ್ತಾ ಸೇವೆಯಲ್ಲಿ ನೆಡುವವರೂ ನೀರು ಹೊಯ್ಯುವವರೂ ಬಹು ವಿಶೇಷವಾದವರಾಗಿದ್ದಾರೆ. ಹೌದು, ನೆಡುವವರೂ ಸುವಾರ್ತಾ ಸೇವೆಯಲ್ಲಿ ವಿಶೇಷವಾದವರಾಗಿದ್ದಾರೆ.

ವಿಶೇಷವಾದ ಜನರು ಅಂದರೆ ಏನಾಗಿದೆ?

ವಿಶೇಷವಾದ ಕಾರ್ಯಕ್ಕೆ ಪ್ರಾಮುಖ್ಯತೆ ಕೊಡುವವರು ದೇವರ ದೃಷ್ಟಿಯಲ್ಲಿ ವಿಶೇಷವಾದವರೆನಿಸಿಕೊಳ್ಳುವರು.

> 1 ಕೊರಿಂಥ 3:6ರಲ್ಲಿ ಪೌಲನು, "ನಾನು ಸಸಿಯನ್ನು ನೆಟ್ಟೆನು" ಎಂದು ಹೇಳುವಾಗ ಸುವಾರ್ತಾ ಸೇವೆಯಲ್ಲಿ ದೇವರು ತನಗೆ "ನೆಡುವಂಥ" ಪಾತ್ರವನ್ನು ದಯಪಾಲಿಸಿದ್ದಾನೆಂದು ಅವನು ಸ್ಪಷ್ಟವಾಗಿ ಅರಿತವನಾಗಿದ್ದನು.
>
> ಪೌಲನು ತನಗೆ ಎಷ್ಟು ಪ್ರಾಮುಖ್ಯವುಳ್ಳವನೆಂಬುದನ್ನು ದೇವರು (ಅ.ಕೃ. 9:15,16) ರಲ್ಲಿ ತಿಳಿಸಿರುವನು. ವಿಶೇಷ ಜನರಿಗಾಗಿ ಒಂದು ವಿಶೇಷವಾದ ಸಂದೇಶವಿರುವದು.

ಸಂದೇಶ ಏನಾಗಿರುವದು?

"ಮನುಷ್ಯನು ಒಬ್ಬ ಪಾಪಿಯಾಗಿರುವನು, ಅವನಿಗೆ ರಕ್ಷಕನು ಬೇಕಾಗಿರುವನು, ಆ ರಕ್ಷಕನೇ ಯೇಸು ಕ್ರಿಸ್ತನಾಗಿರುವನು"

ಮಾನವ ಕುಲಕ್ಕೆ ಪ್ರಾಮುಖ್ಯವಾದದ್ದಾಗಿರುವ ಈ ಸಂದೇಶವು ಲೋಕದವರ ದೃಷ್ಟಿಯಲ್ಲಿ ಪ್ರಾಮುಖ್ಯವಲ್ಲದ್ದಾಗಿರಬಹುದು. ಇದರ ಕುರಿತಾಗಿ ಅನೇಕರು ಅದು ಹೇಗೆ ಮನುಷ್ಯನನ್ನು "ಪಾಪಿ" ಎಂದು ಕರೆಯುವಿರಿ ಎಂಬುದಾಗಿ ಕೋಪದಿಂದ ನುಡಿಯಬಹುದು. ಯೇಸು ಮಾತ್ರವೇ ರಕ್ಷಕನು ಎಂದು ಕೇಳಿಸಿಕೊಳ್ಳುವಾಗ ಅನೇಕರಿಗೆ ಕ್ರೋಧ ಉಂಟಾಗಬಹುದು.

ಮನುಷ್ಯನಲ್ಲಿ ಎಲ್ಲಿಯವರೆಗೆ ಕೆಟ್ಟ ಆಲೋಚನೆಗಳು, ಬಾಯಲ್ಲಿ ಕೆಟ್ಟ ಮಾತುಗಳು, ನೋಟದಲ್ಲಿ ಶರೀರದಾಶೆ, ಹೃದಯದಲ್ಲಿ ತಪ್ಪು ಕಾರ್ಯಗಳು, ದುರ್ಘಟಗಳು ಹಾಗೂ ರಹಸ್ಯದಲ್ಲಿ ತಪ್ಪು ನಡುವಳಿಕೆಗಳು ಇರುವವೋ ಅಲ್ಲಿಯವರೆಗೂ ಅವನು ಪರಿಶುದ್ಧನು ಇಲ್ಲವೆ ದೈವಭಕ್ತನು ಎಂದು ತನ್ನಷ್ಟಕ್ಕೆ ತಾನು ಹೇಳಿಕೊಳ್ಳಲಾಗುವುದಿಲ್ಲ. ಅವನ ಸ್ವಂತ ಮನಸ್ಸೇ ಅವನನ್ನು ಚುಚ್ಚುವದು. ಇಂಥ ಪಾಪದ ಪ್ರಜ್ಞೆಯುಳ್ಳ ಜನರೇ ಪಾಪಿಗಳಾಗಿದ್ದಾರೆ.

ಸತ್ಯವೇದ ರೋಮಾಪುರದವರಿಗೆ 3:12ರಲ್ಲಿ "ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರು, ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ" ಎಂದು ತಿಳಿಸಲಾಗಿದೆ. ಅದರೊಂದಿಗೆ ಸತ್ಯವೇದವು ಹೀಗೂ ತಿಳಿಸುವದು. ಯೇಸು ಕ್ರಿಸ್ತನು ಪಾಪಿಗಳನ್ನು ಹುಡುಕಿ ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬದಾಗಿ.

"ಈ ರಹಸ್ಯವು ಯಾರಿಗೆ ತಿಳಿದಿರುವದೋ, ಇದರ ಪ್ರಕಟನೆಯನ್ನು ಯಾರು ಅಂಗೀಕರಿಸುವರೋ, ಅಂಥವರು ಅಗತ್ಯವಾದ ಸ್ಥಳಗಳಿಗೆ ನಾವು ದೇವರ ಕೃಪೆಯ ಬಗ್ಗೆ ಹಾಗೂ ದೇವರನ್ನು ಸ್ತುತಿಸುವದರ ಬಗ್ಗೆ ಸಾರಿ ಹೇಳುತ್ತೇವೆಂದು ತಮ್ಮ ಪಾದಗಳನ್ನು ಅಲ್ಲಿ ಊರುವರು" (ಯೆಶಾಯ 6:7)

ಯೆಹೂದ್ಯರಿಗೆ ಯೆಹೂದ್ಯರಂತಾಗಿ

ಹಾಗೂ ಗ್ರೀಕರಿಗೆ ಗ್ರೀಕರಂತಾಗಿ ಯಾರು

ತಮ್ಮನ್ನು ಬರಿದುಮಾಡಿಕೊಂಡವರಾಗಿ ತಗ್ಗಿಸಿಕೊಂಡವರಾಗಿ

"ನಾಶವಾಗದ ಬೀಜವನ್ನು" ನೆಡುವರೋ

ಅಂಥವರು ವಿಶೇಷವಾದವರು!

ಲೋಕವು ಅವರನ್ನು ಗಮನಿಸದಿದ್ದರೂ ಚಿಂತೆಯಿಲ್ಲ.

"ಆದರೆ ಪರಲೋಕದ ದೂತರು ಅವರನ್ನು ಗಮನಿಸುವವರಾಗಿದ್ದಾರೆ" (1 ಪೇತ್ರನು 1:12)

ಪವಿತ್ರಾತ್ಮನು ತಮಗೆ ಸೂಚಿಸುವ ಎಲ್ಲಾ ಸ್ಥಳಗಳಿಗೂ ಅವರು ಹೋಗುವರು. ಪ್ರತಿಯೊಂದು ಬಾಗಿಲನ್ನು ತಟ್ಟುವರು.

ವಿಶೇಷವಾದ ಸಂದೇಶವನ್ನು ಮುಖಾಮುಖಿಯಾಗಿ ಹಂಚುವರು. ಪವಿತ್ರಾತ್ಮನು ತಮಗೆ ತೋರಿಸುವಂಥ ಸ್ಥಳಗಳಾದ ಕಾಡು ಬೆಟ್ಟಗಳ ಪ್ರಾಂತ್ಯಕ್ಕೂ, ಮರುಭೂಮಿ, ದ್ವೀಪ, ಪಟ್ಟಣ ಹಾಗೂ ಗ್ರಾಮಗಳಿಗೂ ಹೊರಟು ಹೋಗುವರು.

ಅವರು ಕಾಲಮಾನಗಳನ್ನಾಗಲಿ ಹಾಗೂ ಹವಾಮಾನಗಳ ಪರಿಸ್ಥಿತಿಯನ್ನಾಗಲಿ ನೋಡುವದಿಲ್ಲ. ಆಹಾರದ ವಿಷಯದಲ್ಲವರು ತಲೆಕೆಡಿಸಿಕೊಳ್ಳುವದಿಲ್ಲ.

ಅಂಗಡಿ ಮಳಿಗೆಗಳು, ಮಕ್ಕಳಿಗಾಗಿ ಶಾಲೆಗಳು, ವೈದ್ಯಕೀಯ ಸೌಲಭ್ಯಗಳು, ರಸ್ತೆ ಸಂಪರ್ಕ, ಶುದ್ಧವಾದ ನೀರು ಹೀಗೆ ಇತ್ಯಾದಿಗಳು ಇವೆಯೋ ಇಲ್ಲವೋ ಎಂಬದರ ಬಗ್ಗೆ ಅವರು ಆಲೋಚಿಸುವದಿಲ್ಲ. ಜನರು ತಮ್ಮನ್ನು ಅಂಗೀಕರಿಸುವರೋ ತಿರಸ್ಕರಿಸುವರೋ ಎಂಬ ಆಲೋಚನೆಯನ್ನವರು ಮಾಡದೆ,

(ಅ.ಕೃ. 22:1) ರಲ್ಲಿ "ನೀನು ಹೋಗು, ನಾನು ನಿನ್ನನ್ನು ದೂರಕ್ಕೆ ಅನ್ಯಜನರ ಬಳಿಗೆ ಕಳುಹಿಸುತ್ತೇನೆಂದು" ಪವಿತ್ರಾತ್ಮನು ಹೇಳಿದ ಪ್ರಕಾರ ಅಲ್ಲಿಗೆ ಹೋಗುವುದಕ್ಕೆ ಅವರು ತ್ವರೆಪಡುವರು.

ಹೌದು, ಅವರು ನೆಡುವವರಾಗಿ ಜನರ ಹೃದಯಗಳನ್ನು ಸ್ಪರ್ಷಿಸುವವರಾದ ಕಾರಣ ಅವರು ವಿಶೇಷತೆಯುಳ್ಳವರಾಗಿದ್ದಾರೆ.

ಅವರು ಯೆಶಾಯನಂತೆ ದೇವರ ಸ್ವರವನ್ನು ಕೇಳಿಸಿಕೊಂಡವರಾದ ಕಾರಣ ವಿಶೇಷತೆಯುಳ್ಳವರಾಗಿದ್ದಾರೆ. ಪ್ರಿಯರೇ, ನೆಡುವುದಕ್ಕೆ ಹೋಗುವವರು ಯುವಕರಾಗಿರುವರು!

ಹನ್ನೆರಡು ಮಂದಿ ಶಿಷ್ಯರೊಳಗೆ ಪೇತ್ರನನ್ನು ಹೊರತುಪಡಿಸಿದರೆ, ಬೇರೆ ಶಿಷ್ಯರೆಲ್ಲರೂ 30 ವರ್ಷ ವಯಸ್ಸಿನ ಒಳಗಿನವರೇ ಆಗಿದ್ದರು. ಅವರು ಹೆಚ್ಚು ಅಭ್ಯಾಸ ಮಾಡಿರಲಿಲ್ಲ! ಅವರು ಅವಿದ್ಯಾವಂತರಾಗಿದ್ದರು. ಆದರೆ ಅವರು ದೇವಾದಿ ದೇವರ ದೃಷ್ಟಿಯಲ್ಲಿ ವಿಶೇಷವುಳ್ಳವರಾಗಿದ್ದರು.

**ಸುವಾರ್ತಾ ಸೇವೆಯಲ್ಲಿ ನೀರು ಹೊಯ್ಯುವವರು ಬಹು ವಿಶೇಷವಾದವರಾಗಿದ್ದಾರೆ.**

ವಿಮೋಚನಕಾಂಡ 17:8–13ನ್ನು ಗಮನಿಸಿರಿ.

ಅಮಾಲೇಕ್ಯರ ಮಧ್ಯದಲ್ಲಿ ಇಸ್ರಾಯೇಲ್ಯರನ್ನು ನೆಡುವುದಕ್ಕಾಗಿ ಯೆಹೋಶುವನು ಸನ್ನದ್ಧನಾಗಿ, ಮೆಸ್ಸೀಯನ ಬರೋಣಕ್ಕಾಗಿ ಅವನು ಬೀಜವನ್ನು ಬಿತ್ತಲು ಯುದ್ಧ ಭೂಮಿಯಲ್ಲಿ ಪಾದವನ್ನಿಟ್ಟನು! ಮೋಶೆ, ಆರೋನ ಹಾಗೂ ಹೂರ ಎಂಬ ಮೂವರು ತಮ್ಮ ಕಣ್ಣೀರಿನಿಂದ ಯೆಹೋಶುವನಿಗೆ ನೀರು ಹೊಯ್ಯಲು ಗುಡ್ಡದ ತುದಿಯವರೆಗೂ ಹೋದರು!

ಯೆಹೋಶುವನು ವಿಶೇಷವುಳ್ಳ ವ್ಯಕ್ತಿಯೇ, ಆದರೂ ಬೇರೆ ಮೂವರು ಬಹು ವಿಶೇಷವುಳ್ಳವರೆನಿಸಿದರು. ಯಾಕಂದರೆ? ಅವರು ನೀರು ಹೊಯ್ಯುವಾಗ ಯೆಹೋಶುವನು ಗೆಲ್ಲುತ್ತಿದ್ದನು, ಅವರು ನೀರು ಹೊಯ್ಯುವುದನ್ನು ನಿಲ್ಲಿಸುವಾಗ ಯೆಹೋಶುವನು ಹಿಂದಕ್ಕೆ ಸರಿಯುತ್ತಿದ್ದನು!

ಸಸಿಯನ್ನು ನೆಟ್ಟಂಥ ಪೌಲನು ವಿಶೇಷವುಳ್ಳವನು!

**ಅಪೊಲ್ಲೋಸ ಅಂದರೆ:** ಒಡೆಯುವವನು ಇಲ್ಲವೆ ಹಾಳುಮಾಡುವನು ಎಂದರ್ಥ. ಆದರೆ ಪವಿತ್ರಾತ್ಮನು ಅವನನ್ನು ಪೌಲನಿಗೆ ನೀರು ಹೊಯ್ಯುವವನನ್ನಾಗಿ ಮಾಡಿದನು.

ಪೌಲನು ತಿಳಿಸುತ್ತಿದ್ದ ಕೆಲವು ವಿಷಯಗಳು ತಿಳಿದುಕೊಳ್ಳುವುದಕ್ಕೆ ಕಷ್ಟಕರವಾಗಿರುತ್ತಿದ್ದವು (2 ಪೇತ್ರನು 3:16) ಅಂಥ ಕಷ್ಟಕರವಾದ ವಿಷಯಗಳನ್ನು ಸರಳವಾಗಿ ತಿಳಿಸುವಂಥ ಸಾಮರ್ಥ್ಯವನ್ನು ಅಪೊಲ್ಲೋಸನು ಹೊಂದಿದ್ದನು. ಹಾಗಾಗಿ ಪೌಲನು ಎಲ್ಲೆಲ್ಲಿ ಹೋಗುತ್ತಿದ್ದನೋ ಅಲ್ಲೆಲ್ಲಾ ಅವನ ಸಂದೇಶವನ್ನು ವಿವರಿಸುವುದಕ್ಕೆ ಅಪೊಲ್ಲೋಸನು ಹೋಗುತ್ತಿದ್ದನು!

(1 ಕೊರಿಂಥ 3:6) ರಲ್ಲಿ ಪೌಲನು ಅಪೊಲ್ಲೋಸನ ಬಗ್ಗೆ, ಅವನು ತನ್ನ ಬಗ್ಗೆ ತಮಾಷೆ ಮಾಡದವನೂ, ಕೆಟ್ಟದ್ದಾಗಿ ಮಾತಾಡದವನು. ತನ್ನ ಬಗ್ಗೆ ಖಂಡಿಸದವನು ಅಥವಾ ತನ್ನ ಸೇವೆಯನ್ನು ಬೆಳೆಸಿಕೊಳ್ಳಲು ಬೇರೊಬ್ಬರ ಸೇವೆಯನ್ನು ಕೆಡಿಸದವನೂ ಆಗಿದ್ದನೆಂದು ವಿವರಿಸಿರುವನು.

ಹೌದು ಅಪೊಲ್ಲೋಸನು ಬೆಳೆಗಳನ್ನು ಹಾಳುಮಾಡುತ್ತಿರಲಿಲ್ಲ. ಅವನು ಸಸಿಗಳು ಬೆಳೆಯಬೇಕೆಂಬದಾಗಿ ನೀರು ಹೊಯ್ಯುವವನಾಗಿದ್ದನು. ಆದ್ದರಿಂದ ಅಪೊಲ್ಲೋಸನು ಬಹು ವಿಶೇಷತೆಯುಳ್ಳವನಾಗಿದ್ದಾನೆ.

– ಯೆಹೋಶುವನಿಂದ ನೆಡಲ್ಪಟ್ಟ ಸಸಿಗಳಿಗೆ
ಮೂವರು ನೀರು ಹೊಯಿದರು!

– ಪೌಲನಿಂದ ನೆಡಲ್ಪಟ್ಟ ಸಸಿಗಳಿಗೆ
ಅಪೊಲ್ಲೋಸನು ಹಾಗೂ ಬೇರೆ ಮೂವತ್ತು ಜನರು ನೀರು ಹೊಯಿದರು!

ರೋಮಾಪುರದವರಿಗೆ 16ನೇ ಅಧ್ಯಾಯವು ಅವರಲ್ಲಿಯ ಕೆಲವರನ್ನು ತಮ್ಮ ಗಮನಕ್ಕೆ ತರುವದು, ಅವರೆಲ್ಲರೂ ಬಹು ವಿಶೇಷವುಳ್ಳ ವ್ಯಕ್ತಿಗಳಾಗಿದ್ದಾರೆ. ಪೌಲನಿಗೆ ಯಾವ ಮಟ್ಟದ ವರೆಗೆ ಅವಶ್ಯಕತೆಯಿತ್ತೋ ಆ ಮಟ್ಟದ ವರೆಗೆ ನೀರು ಹೊಯಿದ ಅಕ್ವಿಲ, ಪ್ರಿಸ್ಕಿಳ ಹಾಗೂ ಪೊಯಿಬೆಯನ್ನು ಒಳಗೊಂಡ ಎಲ್ಲರ ಹೆಸರುಗಳು 16ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿರುವವು. ಅವರೆಲ್ಲರೂ ಮಹಾ ಪ್ರಯೋಜನವುಳ್ಳವರಾಗಿದ್ದರು.

ಅವರು ಪೌಲನಿಗೋಸ್ಕರ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿಮಾಡಿಕೊಂಡಿದ್ದರು. (ರೋಮಾ. 16:4). ಹೀಗಾಗಿ ಅವರು ಬಹು ವಿಶೇಷವುಳ್ಳವರಾದರು. ಹೌದು, ಕರ್ತನಾದ ಯೇಸು ಕ್ರಿಸ್ತನ ಸೇವೆಯಲ್ಲಿ ಸಸಿ ನೆಡುವವರು ವಿಶೇಷ ವ್ಯಕ್ತಿಗಳಾದರೆ, ನೀರು ಹೊಯ್ಯುವವರು ಬಹು ವಿಶೇಷ ವ್ಯಕ್ತಿಗಳಾಗಿದ್ದಾರೆ. ಆದರೂ ಬೆಳೆಸುತ್ತಾ ಬರುವ ದೇವರೇ ಅತ್ಯಂತ ವಿಶೇಷವಾದವನಾಗಿದ್ದಾನೆ. "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" (ಯೋಹಾನ 15:5) ಎಂದು ಕರ್ತನು ಹೇಳಿರುವವನಾದ್ದರಿಂದ, ಆತನೇ ಅತ್ಯಂತ ವಿಶೇಷವಾದವನಾಗಿದ್ದಾನೆ.

ಅ.ಕೃ. 4:12 "ಯೇಸು ಕ್ರಿಸ್ತನ" ಹೊರತು ಬೇರೆ ಯಾರಿಂದಲೂ ರಕ್ಷಣೆಯಾಗುವದಿಲ್ಲ – ಆದದರಿಂದ ಆತನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

ಕರ್ತನಾದ ಯೇಸು ಕ್ರಿಸ್ತನು:

ಪಾಪಗಳನ್ನು ಕ್ಷಮಿಸಿಬಿಡುವುದಕ್ಕೆ ಮನುಷ್ಯ ಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂದು ಹೇಳಿರುವನು. ಆದದರಿಂದ ಆತನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

ಸತ್ಯಕ್ಕೆ ವಿರುದ್ಧವಾಗಿ ನಾವೇನೂ ಮಾಡಲಾರೆವು ಎಂದು ಪರಲೋಕವು ಘೋಷಿಸಿರುವ ಕಾರಣ ಆತನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

ಕೀರ್ತನೆ 127:1 ರಲ್ಲಿ ಕೀರ್ತನೆಗಾರನು

"ಯೆಹೋವನು ಮನೇ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ" ಎಂದು ಹೇಳಿರುವನಾದ್ದರಿಂದ ಆತನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

(ಯೆರೆಮೀಯ 10:23) ರಲ್ಲಿ "ಮಾನವನ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು; ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" ಎಂದು ಪರಲೋಕವು ಘೋಷಿಸಿರುವ ಕಾರಣ – ಆತನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ (ರೋಮಾ. 9:16) ರಲ್ಲಿ ಸ್ವತಃ ಪೌಲನು,

"ದೇವರ ದಯವು ಮನುಷ್ಯರಿಗೆ ಇಚ್ಛೈಸುವದರಿಂದಾಗಲಿ ಪ್ರಯತ್ನಿಸುವದರಿಂದಾಗಲಿ ದೊರೆಯದೆ ದೇವರು ಕರುಣಿಸುವದರಿಂದಲೇ ದೊರೆಯುತ್ತದೆ" ಎಂದು ಹೇಳಿರುವುದರಿಂದ ಯೇಸುವೇ ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

ತಂದೆಯಿಂದಲೂ ಯೇಸು ಕ್ರಿಸ್ತನಿಂದಲೂ ಹೊರಟು ಭೂಲೋಕಕ್ಕೆ ಇಳಿದು ಬಂದ ಪವಿತ್ರಾತ್ಮನು ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದಾನೆ.

ಆತನು : ನಾನು ಏಸಾವನನ್ನು ದ್ವೇಷಿಸುತ್ತೇನೆಂದು ಹೇಳಿದ್ದು ಯಾಕೆ?

ಆತನು : ನಾನು ಯಾಕೋಬನನ್ನು ಪ್ರೀತಿಸುತ್ತೇನೆಂದು ಹೇಳಿದ್ದು ಯಾಕೆ?

ಯಾಕೋಬನು ಅನೇಕ ತಪ್ಪುಗಳನ್ನು ಮಾಡಿದವನಾದರೂ ಅವನ ಹೃದಯವು ದೇವರ ಹತ್ತಿರಕ್ಕೆ ಬರಲು ಹಂಬಲಿಸುತ್ತಿತ್ತು.

ಆದರೆ ಏಸಾವನಲ್ಲಿ ಆ ಹಂಬಲವಿರಲಿಲ್ಲ.

ಯಾಕೋಬನು ಆಶೀರ್ವಾದಕ್ಕಾಗಿ ದೇವರೊಂದಿಗೆ ಹೋರಾಡಿದರೆ, ಏಸಾವನು ತನ್ನೊಳಗೇ ಹೋರಾಡಿಕೊಂಡನು.

ಕರ್ತನು ನಂಬಿಗಸ್ತರಿಗೆ ನಂಬಿಗಸ್ತನೇ ಆಗಿದ್ದಾನೆ; ಕಳಂಕವಿಲ್ಲದವರಿಗೆ ಕಳಂಕ ವಿಲ್ಲದವನಾಗಿದ್ದಾನೆ. ಬಡವರಿಗೆ ಬಡವನೂ ಮೂರ್ಖರಿಗೆ ವಕ್ರನೂ ಆಗಿರುವನು.

ಕರ್ತನಾದ ಯೇಸು ಕ್ರಿಸ್ತನ ಸುವಾರ್ತಾ ಸೇವೆಯಲ್ಲಿ ಸಸಿ ನೆಡುವವರು ಯಾರಾಗಿದ್ದಾರೆ? ನಮ್ಮ ಹೃದಯಗಳು ಯೇಸುವಿಗೆ ಸಂಬಂಧಿಸಿದವುಗಳೆಂದು ಯಾರು ಸಂಕಲ್ಪ ಪತ್ರಗಳನ್ನು ಬರೆದಿಡುವರೋ ಅವರಾಗಿದ್ದಾರೆ.

ನೀರು ಹೊಯ್ಯುವರು ಯಾರಾಗಿದ್ದಾರೆ?

ಸುವಾರ್ತೆ ಸಾರುವವರನ್ನು, ಪೂರ್ಣಾವಧಿ ಸೇವಕರನ್ನು, ಸಭಾಪಾಲಕರನ್ನು, ಬೋಧಕರನ್ನು ಹಾಗೂ ಸ್ವತಂತ್ರ ಸೇವಕರನ್ನು ಯಾರು ಪೂರ್ಣ ಹೃದಯದಿಂದ ಪ್ರೀತಿಸುವವರಾಗಿ ಅವರ ಪೋಷಣೆ ಮಾಡುವರೋ ಅವರೇ ನೀರು ಹೊಯ್ಯುವವರಾಗಿದ್ದಾರೆ.

ಇಸ್ರಾಯೇಲ್ಯರ ಗ್ರಾಮಗಳಿಗಾಗಿ ಹೃದಯ ಮುರಿದವರಾಗಿ ಗ್ರಾಮದತ್ತ ತೆಗೆದುಕೊಂಡ ಇತರ ವಿಶ್ವಾಸಿಗಳೊಂದಿಗೆ ಕೂಡಿಕೊಳ್ಳುವರು ನೀರು ಹೊಯ್ಯುವವರಾಗಿದ್ದಾರೆ.

ಪ್ರಿಯರೇ, ಕರ್ತನಾದ ಯೇಸು ಕ್ರಿಸ್ತನ ಸುವಾರ್ತಾ ಕೆಲಸದಲ್ಲಿ ನೀವು ವಿಶೇಷವುಳ್ಳವರು ಹಾಗೂ ಬಹು ವಿಶೇಷವುಳ್ಳವರು ಆದ ವ್ಯಕ್ತಿಗಳಾಗಲು ತಿರುಗಿಕೊಳ್ಳುವ ದಾದರೆ, ಆಗ ಕರ್ತನಾದ ಯೇಸು ಕ್ರಿಸ್ತನು ನಿಮಗೂ ಮತ್ತು ನಿಮ್ಮ ಕುಟುಂಬಕ್ಕೂ ಅತ್ಯಂತ ವಿಶೇಷ ವ್ಯಕ್ತಿಯಾಗಿರುವನು. ನಿಮ್ಮ ಜೀವಿತವು ಅತ್ಯಂತ ಐಶ್ವರ್ಯವುಳ್ಳದ್ದಾಗಿ ತುಂಬಲ್ಪಡುವದು. ಆಮೆನ್.

# ಪ್ರಾರ್ಥನೆ

ಎಲ್ಲವನ್ನೂ ಅರಿತಿರುವಂಥ ಎಲ್ಲವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವಂಥ ಸರ್ವಶಕ್ತನಾದ ದೇವರೇ, ನಮ್ಮಂಥ ಸಂತಾನದವರು ಈ ಲೋಕದಲ್ಲಿ ಎಷ್ಟು ಬಂದರು ಹಾಗೂ ಎಷ್ಟು ಹೋದರು ಎಂಬದು ನೀನೊಬ್ಬನೇ ತಿಳಿದಿರುವಿ. ಈ ಲೋಕದಲ್ಲಿ ನಾವು ಎಷ್ಟು ಕಾಲ ಜೀವಿಸುತ್ತೇವೆಂಬದೂ ನೀನೊಬ್ಬನೇ ತಿಳಿದಿರುವಿ!

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ ಎಂದು ಹೇಳಿದವನಾದ ಕರ್ತನೇ, ಈ ಪ್ರಾರ್ಥನೆಯನ್ನು ಓದುವವರೆಲ್ಲರನ್ನು ನೀನು ಪ್ರೀತಿಸ ಬೇಕೆಂದು ಪ್ರಾರ್ಥಿಸುವೆವು. ಅನೇಕ ಸಂದರ್ಭಗಳಲ್ಲಿ ನಾವು ತಪ್ಪು ಮಾಡಿ ದಾಗ್ಯೂ ನೀನು ನಮಗೆ ಕೃಪೆಯುಳ್ಳವ ನಾಗಿರಬೇಕೆಂದು ಪ್ರಾರ್ಥಿಸುವೆವು.

ಕರ್ತನೇ ಈ ಲೋಕದಲ್ಲಿ ಜೀವಿಸುವವರಾದ, ನಮಗೆ ಒಳ್ಳೇ ಆರೋಗ್ಯವನ್ನು, ಬಲವನ್ನು ದೀರ್ಘಾಯುಷ್ಯವನ್ನು, ಕೆಲಸದಲ್ಲಿ ಜಯವನ್ನು, ತಕ್ಕ ಆದಾಯವನ್ನು, ಪವಿತ್ರಾತ್ಮನ ಮೂಲಕ ಹೃದಯದಲ್ಲಿ ಸಂತೋಷವನ್ನು, ಆತ್ಮದಲ್ಲಿ ನಿನ್ನೊಂದಿಗೆ ಆನಂದಿಸಲು ಆಶೀರ್ವಾದವನ್ನು, ಕುಟುಂಬದಲ್ಲಿ ಮಕ್ಕಳ ಭಾಗ್ಯವನ್ನು, ಮಕ್ಕಳಲ್ಲಿ ಐಕ್ಯತೆಯನ್ನು, ಆಶೀರ್ವದಿಸಲ್ಪಟ್ಟ ಭವಿಷ್ಯತ್ತನ್ನು, ಮನೆಯ ಸುತ್ತಲೂ ದೇವದೂತರ ಕಾವಲನ್ನು ನಾವು ಹೊರಗೆ ಹೋಗುವಾಗ ಮತ್ತು ಒಳಗೆ ಬರುವಾಗ ನಿನ್ನ ದೈವೀಕ ಪ್ರಸನ್ನತೆಯನ್ನು, ನಿನ್ನ ಸೇವೆಯಲ್ಲಿ ಸಾರುವಂಥ ನೆಡುವಂಥ ಇಲ್ಲವೆ ನೀರು ಹೊಯ್ಯುವಂಥ ಒಂದು ಪಾತ್ರವನ್ನು ನೀನು ತುತೂರಿ ಧ್ವನಿಯೊಡನೆ ಈ ಲೋಕಕ್ಕೆ ಎರಡನೇ ಸಲ ಬರುವ ಸಮಯದವರೆಗೂ ಅನುಗ್ರಹಿಸಬೇಕೆಂದು ಆಕಾಶ ಮತ್ತು ಭೂಮಿಯಲ್ಲಿ ಅತ್ಯಂತ ಪ್ರಾಮುಖ್ಯವುಳ್ಳ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿಕೊಳ್ಳುತ್ತೇವೆ. ನಮ್ಮ ಪ್ರಾರ್ಥನೆ ಲಾಲಿಸಿದ್ದಕ್ಕಾಗಿ ನಿನ್ನನ್ನು ಸ್ತುತಿಸಿ ಕೊಂಡಾಡುತ್ತೇವೆ. ಆಮೆನ್.

# ನೆಟ್‌ವರ್ಕ್ ಚೇರ್ಮನ್ನರಿಂದ

ಕರ್ತನಲ್ಲಿ ಪ್ರಿಯರಾದ ವಿಶ್ವವಾಣಿ ಸಮರ್ಪಣ್ ಮಾಸಪತ್ರಿಕೆಯನ್ನು ಪಡೆದು, ಅದನ್ನು ಜಾಗರೂಕತೆಯಿಂದ ಓದಿ, ಅದರ ಸಂಬಂಧವಾಗಿ ಕಾಳಜಿ ಮಾಡುವವರಾದ ಸಹೋದರ ಸಹೋದರಿಯರಿಗೆ, ತಂದೆಯಾದ ದೇವರಿಂದಲೂ, ರಕ್ಷಕನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಶುಭವೂ ಕೃಪೆಯೂ ಉಂಟಾಗಲಿ.

ಕರ್ತನಾದ ಯೇಸು ಕ್ರಿಸ್ತನು ಜಮ್ಮು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಮತ್ತು ಗುಜರಾತಿನಿಂದ ಹಿಡಿದು ಮಣಿಪುರದ ವರೆಗೂ ರಕ್ಷಕನಾಗಿದ್ದಾನೆಂದು ಸಾರುವಂಥ ಅವಕಾಶವು ನಮಗೆ ಅನುಗ್ರಹಿಸಿದ್ದಕ್ಕಾಗಿ ನಾನು ಕರ್ತನಿಗೆ ಕೃತಜ್ಞತೆಗಳನ್ನು ಸಲ್ಲಿಸುವವನಾಗಿದ್ದೇನೆ (ಅ.ಕೃ. 5:31). ಈ ಸಂಚಿಕೆಯಲ್ಲಿ ನಾನು ಉತ್ತರ ಭಾರತದ ರಾಜ್ಯಗಳಾದ ಜಮ್ಮು–ಕಾಶ್ಮೀರ, ಪಂಜಾಬ, ಹಿಮಾಚಲ ಪ್ರದೇಶ ಹಾಗೂ ಉತ್ತರಖಂಡ ರಾಜ್ಯಗಳ ಸೇವೆಗಳ ಬಗ್ಗೆ ಹಂಚಿಕೊಳ್ಳುವವನಾಗಿದ್ದೇನೆ.

**ರಾಜ್ಯಗಳ ಕುರಿತು ಅವಲೋಕನ:** ಜಮ್ಮು ಕಾಶ್ಮೀರದ ಸರಹದ್ದಿನಲ್ಲಿ ಝೀಲಮ್, ಚೆನಾಬ ಹಾಗೂ ರವಿ ಎಂಬ ನದಿಗಳು ಹರಿಯುತ್ತವೆ. 1 ಕೋಟಿ 22 ಲಕ್ಷ ಜನಸಂಖ್ಯೆ ಹೊಂದಿರುವ 20 ಜಿಲ್ಲೆಗಳು ಅಲ್ಲಿರುವವು. ಅಲ್ಲಿಯ ಜನರು ಕಾಶ್ಮೀರಿ, ಡೋಗ್ರಿ, ಹಿಂದಿ ಹಾಗೂ ಉರ್ದು ಭಾಷೆಗಳನ್ನು ಅಧಿಕೃತವಾಗಿ ಮಾತಾಡಿದರೆ, ಕಶ್ಮೀರ್, ಗೊಜ್ರಿ, ಪಹಾರಿ, ಪಂಜಾಬಿ, ಬಾದರವಾಹಿ, ಸರಾಝಿ, ಬೋವರ್, ಶಿನಾ, ಬುರುಷಕಿ ಹಾಗೂ ಬಟೇರಿ ಎಂಬ ಭಾಷೆಗಳು ಪ್ರಾಂತೀಯ ಭಾಷೆಗಳಾಗಿರುವವು. ಪ್ರದೇಶವು ಸಮುದ್ರ ಮಟ್ಟಕ್ಕೆ ಮೇಲೆ 23,409 ಅಡಿಗಳಷ್ಟಿರುವದು. ಭಾರತದಲ್ಲಿಯ ಪರ್ವತಗಳ ಮೇಲಿರುವ 13 ರಾಜ್ಯಗಳಲ್ಲಿ ಹಿಮಾಚಲ ಪ್ರದೇಶವು ಒಂದು ರಾಜ್ಯವಾಗಿದೆ. ಇದು ಹಿಮಾಲಯದ ಪಶ್ಚಿಮದ ಭಾಗದಲ್ಲಿರುವದು. ಇದರಲ್ಲಿ 13 ಜಿಲ್ಲೆಗಳಿದ್ದು 68 ಲಕ್ಷ 64 ಸಾವಿರ ಜನರು ವಾಸವಾಗಿದ್ದಾರೆ. 20,934 ಗ್ರಾಮಗಳನ್ನು ಹೊಂದಿರುವಂಥ ಶಿಮ್ಲಾ ಇದರ ರಾಜಧಾನಿಯಾಗಿರುವದು. ಶೇ. 86.06 ರಷ್ಟು ಸಾಕ್ಷರತೆಯಿರುವ ಈ ರಾಜ್ಯದಲ್ಲಿ ಹಿಮಾಚಲಿ, ಹಿಂದಿ ಹಾಗೂ ಕಿನ್ನೌರಿ ಭಾಷೆಗಳು ಪ್ರಚಲಿತದಲ್ಲಿರುವವು. ಭಾರತದಲ್ಲಿ ಹೆಚ್ಚು ಭೂಪ್ರದೇಶವನ್ನು ಹೊಂದಿರುವ 19ನೇ ರಾಜ್ಯವು ಅದು ಪಂಜಾಬ ಆಗಿರುವದು. ಸಿಂಧು ನದಿಯ ಉಪನದಿಗಳಾದ ಸಟ್ಲೇಜ್, ಬಿಯಾಸ್ ಹಾಗೂ ರವಿ ಎಂಬವುಗಳು ಇಲ್ಲಿ ಹರಿಯುತ್ತವೆ. ಪಂಜಾಬಿನ 2 ಕೋಟಿ 77 ಲಕ್ಷ ಜನರಲ್ಲಿ ಶೇ. 37.48 ರಷ್ಟು ಜನರು ಪಟ್ಟಣಗಳಲ್ಲಿ ವಾಸವಾಗಿದ್ದರೆ, ಶೇ. 62.52 ರಷ್ಟು ಜನರು ಗ್ರಾಗಳಲ್ಲಿ ವಾಸವಾಗಿದ್ದಾರೆ. ಪಂಜಾಬಿನಲ್ಲಿ 13.087 ಗ್ರಾಮಗಳಿರುವವು.

ಉತ್ತರಖಂಡ ಅಂದರೆ ಉತ್ತರಭಾಗದ ರಾಜ್ಯ ಎಂದರ್ಥ. ಇದರಲ್ಲಿ ಗರ್ಢವಾಲ್ ಹಾಗೂ ಕುಮಾವನ್ ಎಂಬ ಎರಡು ಪ್ರಾಂತ್ಯಗಳಿರುವವು. 17,033 ಗ್ರಾಮುಗಳುಳ್ಳ 17 ಜಿಲ್ಲೆಗಳನ್ನು ಈ ರಾಜ್ಯವು ಹೊಂದಿರುವದು. ಒಂದು ಕೋಟಿಗಿಂತಲೂ ಹೆಚ್ಚು ಜನ ಸಂಖ್ಯೆಯಿರುವದು. ರಾಜ್ಯದ ಶೇ. 86 ರಷ್ಟು ಭಾಗವು ಪರ್ವತಗಳಿಂದಲೂ ಹಾಗೂ ಶೇ. 65 ರಷ್ಟು ಭಾಗವು ಅರಣ್ಯ ಪ್ರದೇಶದಿಂದಲೂ ಕೂಡಿರುವದು. ಅಲ್ಲಿಯ ಜನರು ಸಂಸ್ಕೃತಿಯಲ್ಲಿಯೂ ಆಹಾರ ಪದ್ಧತಿಗಳಲ್ಲಿಯೂ ವಾಯುಗುಣಕ್ಕೆ ಒಗ್ಗಿಕೊಳ್ಳುವುದರಲ್ಲಿಯೂ ಭಾಷೆ ಹಾಗೂ ಹಬ್ಬ ಹರಿದಿನಗಳಲ್ಲಿಯೂ ಮುಂಚೂಣಿಯಲ್ಲಿರುವರು. ಹಣಕಾಸಿನ ಅಭಿವೃದ್ಧಿಯಲ್ಲಿ ಇದು ಎರಡನೆಯ ಸ್ಥಾನದಲ್ಲಿರುವದು.

**ಸೇವೆಯ ಕುರಿತು ಅವಲೋಕನ:** ಕರ್ತನಾದ ದೇವರು ಆ ನಾಲ್ಕು ರಾಜ್ಯಗಳಲ್ಲಿಯೂ 380 ಸ್ಥಳೀಯ ಪೂರ್ಣಾವಧಿ ಮಿಷಿನರಿಗಳನ್ನು ಬಲವಾದ ಸಾಧನಗಳನ್ನಾಗಿ ಉಪಯೋಗಿಸಿಕೊಳ್ಳುತ್ತಿರುವನು.

| ರಾಜ್ಯಗಳು | ಕ್ಷೇತ್ರಗಳು | ಸೇವಾ ಗ್ರಾಮಗಳು | ಆರಾಧನಾ ಗುಂಪುಗಳು | ಸಭಾ ಕಟ್ಟಡಗಳು | ಕಟ್ಟತಕ್ಕ ಸಭಾ ಕಟ್ಟಡಗಳು |
|---|---|---|---|---|---|
| ಜಮ್ಮು ಕಾಶ್ಮೀರ | 40 | 225 | 90 | 7 | 5 |
| ಹಿಮಾಚಲ ಪ್ರದೇಶ | 42 | 223 | 109 | 6 | 12 |
| ಪಂಜಾಬ | 51 | 268 | 182 | 16 | 15 |
| ಉತ್ತರಖಂಡ | 40 | 210 | 68 | 5 | 5 |

ವಿಶ್ವವಾಣಿಯ ಮೂಲಕ ಸೇವೆ ನಡೆಯುತ್ತಿರುವಂಥ ಈ 4 ರಾಜ್ಯಗಳಲ್ಲಿ ನಮ್ಮ ದರ್ಶನದ ಪ್ರಕಾರ 8000 ಗ್ರಾಮಗಳಲ್ಲಿ ಸುವಾರ್ತೆಯನ್ನು ಸಾರುವುದಕ್ಕೋಸ್ಕರ 1600 ಪೂರ್ಣಾವಧಿ ಸೇವಕರ ಅವಶ್ಯಕತೆಯಿರುವದು. ಪ್ರಸ್ತುತವಾಗಿ 320 ಮಿಷಿನರಿಗಳು ಸೇವೆ ಸಲ್ಲಿಸುತ್ತಿರುವರು.

ಈ 4 ರಾಜ್ಯಗಳಿಗೆ ಸಂಬಂಧಿಸಿದಂತೆ ನಮ್ಮ ಸೇವಾ ಪ್ರಧಾನ ಕಛೇರಿಯು ಪಠಾಣಕೋಟೆಯಲ್ಲಿರುವದು. ಇದು ಮೂರು ರಾಜ್ಯಗಳಿಗೂ ತಲುಪುತ್ತದೆ. ಸೇವೆಗೋಸ್ಕರ ಇಲ್ಲಿ ನಮಗೊಂದು ತರಬೇತಿ ಕೇಂದ್ರದ ಅವಶ್ಯಕತೆಯಿದೆ. ಆದದರಿಂದ ಅದಕ್ಕೋಸ್ಕರ ಒಂದು ಎಕರೆ ಭೂಮಿಯನ್ನು ಕೊಂಡುಕೊಂಡು 5000 ಚದರ ಅಡಿಗಳಷ್ಟು ಅಳತೆಯಲ್ಲಿ ತರಬೇತಿ ಕೇಂದ್ರವನ್ನು ಕಟ್ಟುವ ಯೋಜನೆಯಲ್ಲಿರುವದು. ಕರ್ತನ ಕೃಪೆಯಿಂದ ನಾವು (ಆಂಧ್ರ ಪ್ರದೇಶದ) ಅಚ್ಚಾಪುವಲಸದಲ್ಲಿ, (ಒಡಿಷಾದ) ತರಂಗಡದಲ್ಲಿ, (ಗುಜರಾತಿನ) ನವಪಾಡದಲ್ಲಿ, (ಮಹಾರಾಷ್ಟ್ರದ) ಲಗಡವಾಲದಲ್ಲಿ, (ಝಾರ್ಖಂಡದ) ನವತೊಲಿಯಲ್ಲಿ, (ಉತ್ತರ ಪ್ರದೇಶದ) ಸುರೇರಿಯಲ್ಲಿ, (ಪಶ್ಚಿಮ ಬಂಗಾಳದ) ಸಿಲಿಗುರಿಯಲ್ಲಿ ಹಾಗೂ (ತ್ರಿಪುರದ) ವಿಶ್ವವಾಣಿ ಕಾಮಿಯಲ್ಲಿ ಒಟ್ಟು 8 ಸ್ಥಳಗಳಲ್ಲಿ ತರಬೇತಿ ಕೇಂದ್ರಗಳನ್ನು ಹೊಂದಿರುವೆವು. ಈ ಕೇಂದ್ರಗಳಿಂದ ಸೇವೆಯು ಪ್ರಸಾರವಾಗುತ್ತಿದ್ದು, ಬೇರೆ ಬೇರೆ ಪ್ರಾಂತ್ಯಗಳಿಂದ ಸೇವಾಕ್ಷೇತ್ರಗಳಿಗೆ ಬರುವ ಸೇವಾದಾನಿಗಳಿಗೆ ಈ ಕೇಂದ್ರಗಳು ವಾಸಸ್ಥಳಗಳಾಗಿಯೂ ಪ್ರಯೋಜನಕ್ಕೆ ಬರುತ್ತಿರುವವು.



ಈ 4 ರಾಜ್ಯಗಳಲ್ಲಿ ನಡೆಯುತ್ತಿರುವ ಸೇವೆಗೆ ದಕ್ಷಿಣ ತಮಿಳುನಾಡಿನ ವಿಶ್ವಾಸಿಗಳು ಸಹಾಯ ಮಾಡುತ್ತಿರುವರು. ಈ ವರ್ಷದ ಹಣಕಾಸಿನ ವರ್ಷದಲ್ಲಿಯೇ ಪಠಾಣಕೋಟೆಯ ತರಬೇತಿ ಕೇಂದ್ರವನ್ನು ಪೂರ್ಣಗೊಳಿಸಬೇಕಾಗಿರುವದು. ಭೂಮಿಯನ್ನು ಕೊಂಡುಕೊಂಡು ಸಂಬಂಧಿಸಿದ ಕೆಲಸಗಳನ್ನು ಮಾಡಲು 50 ಲಕ್ಷ ರೂಪಾಯಿಗಳ ಅವಶ್ಯಕತೆಯಿದೆ. ಹಾಗೂ 5000 ಚದರ ಅಡಿಗಳ ಅಳತೆಯಲ್ಲಿ ತರಬೇತಿ ಕಟ್ಟಡಕ್ಕೆ 1 ಕೋಟಿ ರೂಪಾಯಿಗಳು ಬೇಕಾಗುವವು. ಒಟ್ಟು ಅವಶ್ಯವಿರುವ ಮೊತ್ತವು 1 ಕೋಟಿ 50 ಲಕ್ಷಗಳು.

ಉತ್ತರ ಭಾರತದ ವಿಶ್ವಾಸಿಗಳ ಮೂಲಕ ಭೂಮಿಯನ್ನು ಕೊಂಡುಕೊಳ್ಳುವದಕ್ಕೂ ಹಾಗೂ ದಕ್ಷಿಣ ಭಾರತದ ವಿಶ್ವಾಸಿಗಳ ಮೂಲಕ ಕಟ್ಟಡ ನಿರ್ಮಾಣಕ್ಕೂ ದೇಣಿಗೆಯನ್ನು ಕೂಡಿಸುವಂಥ ಪ್ರಯತ್ನ ಮಾಡಲಾಗುವದು. ಖಂಡಿತವಾಗಿಯೂ ಕರ್ತನು ಈ ಕಾರ್ಯವನ್ನು ಪೂರೈಸುತ್ತಾನೆಂದು ನಾವು ನಂಬುವೆವು. ನಿರ್ಮಾಣಗೊಳ್ಳುವ ತರಬೇತಿ ಕೇಂದ್ರವು ಮುಂದಿನ ದಿನಗಳಲ್ಲಿ ಉತ್ತರ ಭಾರತದ ವಿಶ್ವಾಸಿಗಳಿಗೆ ತರಬೇತಿ ಪಡೆಯಲು ಪ್ರಯೋಜನವಾದರೆ, ದಕ್ಷಿಣ ಭಾರತದಿಂದ ಉತ್ತರ ಬಾರತದ ಸೇವಾಕ್ಷೇತ್ರಗಳನ್ನು ಸಂಧಿಸಲು ಬರುವ ವಿಶ್ವಾಸಿಗಳಿಗೆ ತಂಗುವದಕ್ಕೂ ಹಾಗೂ ಪ್ರಾರ್ಥನಾ ಕೂಟಗಳನ್ನು ನಡಿಸುವದಕ್ಕೂ ಪ್ರಯೋಜನವಾಗುವದು. ತರಬೇತಿ ಕೇಂದ್ರಕ್ಕೆ ಭೂಮಿಯನ್ನು ಕೊಂಡುಕೊಳ್ಳುವದಕ್ಕೂ ಹಾಗೂ ಕಟ್ಟಡದ ನಿರ್ಮಾಣಕ್ಕೂ ನಿಮ್ಮ ಪಾಲುಗಾರಿಕೆಗಾಗಿ ವಿನಂತಿಸುವೆವು.

**"ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ." (ಫಿಲಿಪ್ಪಿಯವರಿಗೆ 4:13).**

ಹೈದರಾಬಾದ
13.3.2024

ಕ್ರಿಸ್ತನ ಸೇವೆಯಲ್ಲಿ ನಿಮ್ಮ ಸಹೋದರ
**ಪಿ. ಸೆಲ್ವರಾಜ್,** ಚೇರ್‌ಮನ್, ವಿಶ್ವವಾಣಿ ನೆಟ್‌ವರ್ಕ್

# ಕರ್ನಾಟಕ ರಾಜ್ಯ ಸಂಯೋಜಕರಿಂದ

ಶಾಸ್ತ್ರದಲ್ಲಿ ಮುಂತಿಳಿಸಿದ ಪ್ರಕಾರ ನಮ್ಮ ಪಾಪಗಳ ನಿವಾರಣೆಗಾಗಿ ಸತ್ತು, ಹೂಣಲ್ಪಟ್ಟು, ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟ ಮೃತ್ಯುಂಜಯನಾದ ಯೇಸು ಕ್ರಿಸ್ತನ ಅಧಿಕಾರವುಳ್ಳ ನಾಮದಲ್ಲಿ ನಿಮ್ಮೆಲ್ಲರನ್ನು ವಂದಿಸುತ್ತೇನೆ.

ಪ್ರಿಯರೇ, ಈ ತಿಂಗಳ ಮಾಸಪತ್ರಿಕೆಯು ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆ ನೆಡುವವನು ವಿಶೇಷವಾದವನು, ನೀರು ಹೊಯ್ಯುವವನು, ಬಹು ವಿಶೇಷವಾದವನು, ಬೆಳೆಸುವವನು ಅತ್ಯಂತ ವಿಶೇಷವಾದವನು! ಎಂಬ ಶಿರೋನಾಮದಡಿಯಲ್ಲಿ ನಿಮ್ಮ ಕೈತಲುಪಿರುವುದು.

ಸತ್ಯವೇದದಲ್ಲಿ ಸುವಾರ್ತೆ ಸೇವೆಯನ್ನು ಅನೇಕ ಕಡೆಗಳಲ್ಲಿ, ವ್ಯವಸಾಯಗಾರನಿಗೆ ಬಿತ್ತುವವನಿಗೆ ಹೋಲಿಸಲಾಗಿರುವುದು. ಒಂದು ಒಳ್ಳೆಯ ಭೂಮಿಯಲ್ಲಿ ಉತ್ತಮವಾದ ಫಲವನ್ನು ಕಾಣಲು, ಹೇಗೆ ವ್ಯವಸಾಯಗಾರನು, ಪ್ರಯಾಸಪಡುತ್ತಾನೋ ಹಾಗೆ ಸುವಾರ್ತಾ ಸೇವೆಯಲ್ಲಿ ಆತ್ಮಗಳ ಸುಗ್ಗಿಯನ್ನು ಕಾಣಲು, ಪ್ರಯಾಸವು ಬಹಳ ಹಾಗೂ ಪ್ರಾಮುಖ್ಯವಾಗಿರುವುದು. ಆ ಬಿತ್ತುವವನು ಮೊದಲು ಆಳುಗಳನ್ನು ಕರೆದು, ಭೂಮಿಯನ್ನು ಹಸನು ಮಾಡುತ್ತಾನೆ, ನಂತರ ಬೀಜ ಬಿತ್ತುತ್ತಾನೆ, ತದನಂತರ ಅದಕ್ಕೆ ನೀರನ್ನು ಹರಿಸುತ್ತಾನೆ. ಹಾಗೆಯೇ ಸುವಾರ್ತಾ ಸೇವೆಯಲ್ಲಿ 3 ಹಂತಗಳಿರುವವು, ಸುವಾರ್ತೆ ಸಾರುವವನು ಒಬ್ಬ ಮಿಷಿನರಿಯಾಗಿರುವುದಾದರೆ, ಇವನನ್ನು ಬೀಜ ಬಿತ್ತುವನೆಂದು ಕೂಡ ಕರೆಯಲಾಗುವುದು. ಪರಿಶುದ್ಧಾತ್ಮನು ಹೊಲವನ್ನು ಹಸನು ಮಾಡುವನು, ಯಾಕಂದರೆ ಮಾರ್ಗದರ್ಶನವಿಲ್ಲದೆ, ಒಂದು ಗ್ರಾಮಕ್ಕೆ ನಾವು ಸುವಾರ್ತೆಯನ್ನು ತಲುಪಿಸಲು ಸಾಧ್ಯವಿಲ್ಲ, ಪರಿಶುದ್ಧಾತ್ಮನೇ ಜನರ ಹೃದಯಗಳನ್ನು ಸಿದ್ಧಮಾಡುವನೆಂದು, ಇನ್ನು 3ನೆಯದಾಗಿ ಬಿತ್ತಿದ ವಾಕ್ಯವು / ಸುವಾರ್ತೆಯು ಬೆಳೆದು ಫಲನೀಡಲು, ಒಬ್ಬ ವ್ಯಕ್ತಿ ದೇವರನ್ನು ಕಂಡುಕೊಂಡು ದೇವರಿಗಾಗಿ ಫಲಕೊಡುವಂತೆ ಜೀವಿತವನ್ನು ಜೀವಿಸಲು, ದೇವರು ತಾನೇ ಕಾರ್ಯವನ್ನು ನಿರ್ವಹಿಸಬೇಕು. ಯಾಕಂದರೆ ಪ್ರತಿಯೊಬ್ಬರ ಅಂತರಂಗಗಳನ್ನು ತಿಳಿದವನು ಆತನೇ, ಆತನೇ ಜನರ ಹೃದಯಗಳನ್ನು ಮಾನಸಾಂತರಕ್ಕೆ ನಡೆಸುವವನು, ಬದಲಾಯಿಸುವವನು, ಆದಕಾರಣ ಈ ಸುವಾರ್ತಾ ಸೇವೆಗೆ ಮಿಷಿನರಿಗಳನ್ನು ಕಳುಹಿಸುವವರು ಕೂಡ ಬಹಳ ಪ್ರಾಮುಖ್ಯರಾದವರಾಗಿದ್ದಾರೆ. ಒಬ್ಬ ವ್ಯಕ್ತಿಗೆ, ಒಂದು ಗ್ರಾಮಕ್ಕೆ ಸುವಾರ್ತೆ ಸಾರಲು, ಕೇವಲ ಸುವಾರ್ತಿಕನು ಹೋಗಲು ಸಾಧ್ಯವಿಲ್ಲ, ಅವರಿಗಾಗಿ ಪ್ರಾರ್ಥಿಸಲು, ಅವರಿಗಾಗಿ ಸಹಾಯ ಮಾಡಲು, ಅವರನ್ನು ಪೋಷಿಸಲು ಸಭೆಗಳ, ಕುಟುಂಬಗಳ, ವ್ಯಕ್ತಿಗಳ ಅವಶ್ಯಕತೆಯಿರುವದು. ಇದಕ್ಕೆ ರೋಮಾ. 10:14–15 ರಲ್ಲಿ ಪೌಲನು ಈ ರೀತಿ ತಿಳಿಸಿರುವನು. ಸಾರಿಹೇಳುವವನಿಲ್ಲದೆ ಕೇಳುವದು ಹೇಗೆ, ಕಳುಹಿಸಲ್ಪಡದೆ ಸಾರುವುದೆಲ್ಲಿ?

ಪ್ರಿಯರೆ, ನಮ್ಮ ದೇಹದಲ್ಲಿ ಹೇಗೆ ಅನೇಕ ಅಂಗಾಗಗಳಿದ್ದು ಅದರದರ ಕೆಲಸಗಳನ್ನು ನಿರ್ವಹಿಸುತ್ತವೆಯೋ ಹಾಗೆ, ನಮ್ಮ ದೇಹದಲ್ಲಿ ಪ್ರತಿಯೊಂದು ಅಂಗವೂ ಬಹುವಿಶೇಷವಾದದ್ದು. ಅದು ತನ್ನದೇ ಆದ ಪ್ರವೀಣತೆಯನ್ನು ಹೊಂದಿದೆ. ಅದರಿಂದ ಕರ್ತವ್ಯವನ್ನು, ಯಾವ ಫಲಾಪೇಕ್ಷೆಯೂ ಇಲ್ಲದೆ ನಿರ್ವಹಿಸುತ್ತವೆ. ಇದನ್ನು ಪೌಲನು 1 ಕೊರಿಂಥ 12:12–26 ರಲ್ಲಿ ತುಂಬಾ ಸುಂದರವಾಗಿ ವಿವರಿಸಿರುವನು. ಸುವಾರ್ತಾ ಸೇವೆಯಲ್ಲಿ ಒಂದು ಆತ್ಮ, ಒಂದು ಗ್ರಾಮ, ಯೇಸುವನ್ನು ಅರಿತುಕೊಳ್ಳಲು ಪ್ರತಿಯೊಬ್ಬ ವಿಶ್ವಾಸಿಯೂ, ಪ್ರತಿಯೊಬ್ಬ ಸೇವಕನೂ, ಪ್ರತಿಯೊಂದು ಸಭೆಯೂ ಪ್ರಾಮುಖ್ಯವಾಗಿರುವದು. ಹಾಗಾದರೆ ನೀವು ಯಾವುದರಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರುವಿರಿ? ಸಾರುವದರಲ್ಲಿಯೋ? ಕಳುಹಿಸುವುದರಲ್ಲಿಯೋ?

ಪ್ರಿಯರೇ ನಮ್ಮ ಕರ್ನಾಟಕ ರಾಜ್ಯದಲ್ಲಿ 27,000 ಕ್ಕಿಂತಲೂ ಹೆಚ್ಚು ಗ್ರಾಮಗಳಿವೆ. ಈ ಗ್ರಾಮಗಳಲ್ಲಿ ಅನೇಕ ಗ್ರಾಮಗಳಿಗೆ ಒಂದು ಸಾರಿಯೂ ಸೇವಕರು ಹೋಗಿರುವುದಲಿಲ್ಲ. ವಿಶ್ವವಾಣಿ ಸೇವಕರಾದ ನಾವು

ಮುಂದಿನ 2030ನೇ ವರ್ಷದೊಳಗೆ 6000 ಗ್ರಾಮಗಳಿಗೆ ಸುವಾರ್ತೆಯನ್ನು ಸಾರಬೇಕೆಂಬ ದರ್ಶನವನ್ನು ಹೊಂದಿರುವೆವು. ಈ ದರ್ಶನದಲ್ಲಿ ನೀವು ಪ್ರಾರ್ಥನಾ ಪೂರ್ವಕವಾಗಿ ಕೈಜೋಡಿಸಿ, ಒಂದು ಗ್ರಾಮವನ್ನು ದತ್ತು ತೆಗೆದುಕೊಂಡು, ಪ್ರತಿ ತಿಂಗಳು, ಒಂದು ಗ್ರಾಮಕ್ಕೆ 4000 ರೂ. ಹಣ ಸಹಾಯ ಮಾಡುವುದಾದರೆ, ನಿಮ್ಮ ಪರವಾಗಿ, ನಿಮ್ಮ ಕುಟುಂಬದ ಪರವಾಗಿ, ನಿಮ್ಮ ಸಭೆಯ ಪರವಾಗಿ ಒಂದು ಗ್ರಾಮವು ಯೇಸುವನ್ನು ಅರಿಯುತ್ತದೆ. ಇದರಿಂದ ಪರಲೋಕ ರಾಜ್ಯವು ಸಂತೋಷಿಸುವಂತದ್ದಾಗಿದೆ.

ಪ್ರಿಯರೇ, ನಾವು ಯಾವುದೇ ಸಭೆಗೆ, ಯಾವುದೇ ಪಂಗಡಕ್ಕೆ ಸೇರಿದವರಾಗಿರಬಹುದು. ಆದರೂ ನಮ್ಮೆಲ್ಲರಿಗೂ ಒಂದೇ ಸ್ನಾನ, ಒಬ್ಬನೇ ದೇವರು ಒಬ್ಬನೇ ಆತ್ಮ ನಿದ್ದಾನೆ. ನಿಮ್ಮೆಲ್ಲರಿಗಾಗಿ ಸುರಿಸಲ್ಪಟ್ಟದ್ದು ಒಂದೇ ರಕ್ತವಾಗಿದೆ ಎಂಬ ಕಾರ್ಯವನ್ನು ಮರೆಯಬಾರದು. ಆದುದರಿಂದ, ಸುವಾರ್ತಾ ಸೇವೆಗೆ ಸಹಾಯ ಮಾಡುವುದರಲ್ಲಿ ಹಿಂಜರಿಯುವುದು ಬೇಡ. ಈ ಕಾರ್ಯವು ಕರ್ತನ ಬರೋಣದವರೆಗೂ ಮುಂದುವರಿಯುತ್ತಲೇ ಇರುವದು. ಒಂದು ದಿನ ನಮ್ಮ ಕರ್ತನಾದ ಯೇಸು ಕ್ರಿಸ್ತನು ಈ ಲೋಕಕ್ಕೆ ಹಿಂತಿರುಗಿದಾಗ, ನೀವು ಪಟ್ಟ ಪ್ರಯಾಸಕ್ಕೆ ಪ್ರತಿಫಲವನ್ನು ನೀಡುವವನಾಗಿದ್ದಾನೆ. ಯೋಹಾನ 4:36 ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ. ಅವನು ನಿತ್ಯಜೀವಕ್ಕೆ ಫಲವನ್ನು ಕೂಡಿಸುತ್ತಾನೆ. ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವದು. ಪ್ರಿಯರೆ ಸುವಾರ್ತಾ ಸೇವೆಗಾಗಿ ಪ್ರಯಾಸಪಟ್ಟು, ಸುವಾರ್ತಾ ಸೇವೆಗೆ ಸಹಾಯ ಮಾಡುವ ನಿಮ್ಮೆಲ್ಲರಿಗೂ ಆತನು ನಿತ್ಯಜೀವವೆಂಬ ಫಲವನ್ನು ನೀಡುವವನಾಗಿದ್ದಾನೆ. ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

**ಸೇವಾ ವರದಿಗಳು:** ಕರ್ತನಲ್ಲಿ ಪ್ರೀತಿಯುಳ್ಳ ಸೇವಾ ಹಿತೈಷಿಗಳೇ, ಕರ್ನಾಟಕ ರಾಜ್ಯದಲ್ಲಿ ಕರ್ತನು ವಿಶ್ವವಾಣಿ ಸೇವೆಯ ಮೂಲಕ ಮಾಡುತ್ತಿರುವ ಮಹತ್ಕಾರ್ಯಗಳನ್ನು ನಿಮಗೆ ತಿಳಿಸಲು ನಾವು ಸಂತೋಷವುಳ್ಳವರಾಗಿದ್ದೇವೆ.

**ದೀಕ್ಷಾಸ್ನಾನದ ಕಾರ್ಯಕ್ರಮಗಳು:** ದಿನಾಂಕ 30.3.2024 ರಂದು ಬೀದರ್ ಜಿಲ್ಲೆ ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ 5 ಜನ ವಿಶ್ವಾಸಿಗಳು, ವಿಶ್ವಾಸದರಿಕೆಯ ಮೂಲಕ ಯೇಸುವನ್ನು ತಮ್ಮ ರಕ್ಷಕನನ್ನಾಗಿ ಸ್ವೀಕರಿಸಿಕೊಂಡಿರುವರು. ಇವರ ಆತ್ಮೀಕ ಬೆಳವಣಿಗೆಗಾಗಿ ಪ್ರಾರ್ಥಿಸಿರಿ.

ದಿನಾಂಕ 02.04.2024 ರಂದು ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಗ್ರಾಮದಲ್ಲಿ ಸಹೋದರಿ ಭಾಗ್ಯಮ್ಮ ಎಂಬುವವರು ದೀಕ್ಷಾಸ್ನಾನದ ಮೂಲಕ ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು.

**ಸಭೆ ಕಟ್ಟಡದ ಅಡಿಗಲ್ಲು ಸಮಾರಂಭ:** ಕರ್ತನ ಕೃಪೆಯಿಂದ ಪರಶುರಾಮಪುರ ಗ್ರಾಮದಲ್ಲಿ ನೂತನ ಸಭಾ ಕಟ್ಟಡದ ಕೆಲಸವು ಪ್ರಾರಂಭವಾಗಿರುವದು. ಈ ಕಟ್ಟಡದ ಸಂಪೂರ್ಣ ಜವಾಬ್ದಾರಿಕೆಯನ್ನು ರೈಸ್ ಮೆಮೋರಿಯಲ್ ಸಭೆಯ ಸಭಾಪಾಲಕರು, ಸಭಾಪಾಲನ ಸಮಿತಿ ಹಾಗೂ ಸಭೆಯ ವಿಶ್ವಾಸಿಗಳು ತೆಗೆದುಕೊಂಡಿರುವರು, ಈ ಆಲಯ ಪೂರ್ಣಗೊಳಿಸುವುದಕ್ಕಾಗಿ ನಿಮ್ಮ ಪ್ರಾರ್ಥನೆಗಳಲ್ಲಿ ನೆನಪುಮಾಡಿಕೊಳ್ಳಿರಿ ಹಾಗೂ ದೇಣಿಗೆಗಳ ಮೂಲಕ ಸಹಾಯಹಸ್ತ ಚಾಚಿರಿ.

**ಸೇವಾ ಪ್ರಯಾಣಗಳು:** ಕರ್ತನ ಕೃಪೆಯಿಂದ ಕಳೆದ ತಿಂಗಳು ಶ್ರಮ ದಿನಗಳಲ್ಲಿ ವಿವಿಧ ಸಭೆಗಳಲ್ಲಿ ದೇವರ ವಾಕ್ಯವನ್ನು ಹಂಚಿಕೊಳ್ಳಲು ಕರ್ತನು ಸಹಾಯಮಾಡಿದನು.



ದಿನಾಂಕ 15, 16, 17 ಮಾರ್ಚ್ 2024 ರಂದು ಸಿ.ಎಸ್.ಐ. ಕ್ರೈಸ್ಟ್ ದಿ ಕಿಂಗ್ ಚರ್ಚ್, ಹೊಸಪೇಟೆಯಲ್ಲಿ (ಘನ. ರಾಜು ಮಂಗಳೂರು)

ದಿನಾಂಕ 24, 25, 26, 27 ಮಾರ್ಚ್ 2024 ರಂದು ಚೀಯೋನ್ ಮೆಥೊಡಿಸ್ಟ್ ಚರ್ಚ್‌ನಲ್ಲಿ ಪವಿತ್ರ ವಾರದಲ್ಲಿ ದೇವರ ವಾಕ್ಯವನ್ನು ಹಂಚಿಕೊಳ್ಳಲು (ಘನ. ಜಯಪಾಲ್ ಹಾಗೂ ಸಹಾಯಕ ಸಭಾಪಾಲಕರಾದ ಘನ. ಜೇಮ್ಸ್ ಅಯ್ಯನವರು)



ದಿನಾಂಕ 29 ಮಾರ್ಚ್ 2024 ರಂದು, ಇಸಿಐ ಕೇಂದ್ರ ಸಭೆ ಗಂಗವತಿ (ಬಿಷಪ್ ಜಾನ ಮುಳ್ಳೂರು).



ದಿನಾಂಕ 31 ಮಾರ್ಚ್ 2024 ರಂದು ಒಂದೇ ಮಾರ್ಗ ಚರ್ಚ್ (ಘನ. ನವೀನ ಕುಮಾರ ನಂದೀಹಾಳ) ಹೀಗೆ ಮೇಲ್ಕಂಡ ಸಭೆಗಳಲ್ಲಿ ವಾಕ್ಯಸಂದೇಶ ನೀಡಲು ಸದಾವಕಾಶ ಮಾಡಿಕೊಟ್ಟ ಎಲ್ಲಾ ಸಭಾಪಾಲಕರಿಗೂ ಸಭಾಪಾಲನ ಸಮಿತಿಯವರಿಗೂ ಸಭೆಯ ಎಲ್ಲಾ ಸದಸ್ಯರಿಗೂ ತುಂಬು ಹೃದಯದ ವಂದನೆಗಳನ್ನು ಸಲ್ಲಿಸುತ್ತೇನೆ.



ದಿನಾಂಕ 3 ಮತ್ತು 4 ಏಪ್ರಿಲ್ 2024 ರಂದು ಬೆಂಗಳೂರಿನ ಪಾಲನ ಭವನದಲ್ಲಿ ಸೇವಕರಿಗಾಗಿ ಯೋಜನ ಕೂಟವನ್ನು ಏರ್ಪಡಿಸಲಾಗಿತ್ತು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಅಭಿವೃದ್ಧಿ ಸೇವಕರು ಕೂಡಿಬಂದು, ಮುಂದಿನ 6 ತಿಂಗಳಿಗೆ ಯೋಜನೆಯನ್ನು ರೂಪಿಸುವಂತೆ, ನಮ್ಮ ಸೇವೆಯ ದರ್ಶನಕ್ಕಾಗಿ ಪ್ರಾರ್ಥಿಸುವಂತೆಯೂ, ನಮ್ಮ ಎಲ್ಲಾ ದಾನಿಗಳಿಗಾಗಿ ಪ್ರಾರ್ಥಿಸಲು ಕರ್ತನು ಸಹಾಯ ಮಾಡಿದನು.



**ವಿಶೇಷ ವರದಿ:** ದಿನಾಂಕ 9.4.2024 ರಂದು ಒಂದು ದಿನದ ದರ್ಶನಕೂಟವನ್ನು ಮೈಸೂರಿನಲ್ಲಿರುವ ಸೇವಾದಾನಿಗಳಿಗಾಗಿ, ಆಶೀರ್ವಾದ ರಿಟ್ರೀಟ್ ಸೆಂಟರ್, ಶ್ರೀರಂಗಪಟ್ಟಣದಲ್ಲಿ ಏರ್ಪಡಿಸಲಾಗಿತ್ತು. ಈ ಕೂಟದಲ್ಲಿ 103 ಜನ ಸೇವಾ ಹಿತೈಷಿಗಳು ಸೇರಿಬಂದು ಕರ್ತನ ವಾಕ್ಯದಲ್ಲಿ ಬಲಹೊಂದಲು ಕರ್ತನು ಸಹಾಯ ಮಾಡಿದನು, ಈ ಕೂಟದಲ್ಲಿ ಮುಂಜಾನೆಯ ಭಾಗದಲ್ಲಿ ನಾನು, ಮಧ್ಯಾಹ್ನದ ಭಾಗದಲ್ಲಿ ನಮ್ಮ ಪ್ರಾಂತೀಯ ಸಂಯೋಜಕರಾಗಿರುವ ಘನ. ಡಾ. ಗಾಬ್ರಿಯೇಲ್ ಘಂಟರವರು, ದೇವರ ವಾಕ್ಯದ ಸಂದೇಶಗಳನ್ನು ನೀಡಿದರು. ಹಾಗೂ ಸೇವೆಯ ಕುರಿತು ಮಾಹಿತಿಗಳನ್ನು, ಘನ. ಡಾ. ನೋಹನರಾಜ್‌ರವರು ಹಂಚಿಕೊಂಡು ಈ ಕೂಟವು ತುಂಬಾ ಆಶೀರ್ವಾದದಾಯಕವಾಗಿತ್ತು. ಇದರ ಯಶಸ್ಸಿಗಾಗಿ ಪ್ರಯಾಪಟ್ಟು ತುಂಬಾ ಸುವ್ಯವಸ್ಥಿತವಾಗಿ, ಏರ್ಪಾಡುಗಳನ್ನು ಮಾಡಿದ ನಮ್ಮ ಸ್ಥಳೀಯ ಸೇವಕರಾದ ಘನ. ಜೋಸೆಫ್ ರವಿಕುಮಾರ್ ಅವರಿಗೂ ಅವರ ಕುಟುಂಬವರ್ಗದವರಿಗೂ ನಾನು ವಂದಿಸುತ್ತೇನೆ ಹಾಗೂ ಸ್ಥಳೀಯ ಪ್ರತಿನಿಧಿಯಾಗಿ ಸೇವೆ ಸಲ್ಲಿಸುವ ಸಹೋ. ಜಾನ್. ಕೆನಡಿ ಅಣ್ಣನವರಿಗೂ ವಂದಿಸುತ್ತೇನೆ. ಈ ಕೂಟದಲ್ಲಿ ಸ್ತುತಿ ಆರಾಧನೆ ಮೂಕ ದೇವರನ್ನು ಮಹಿಮೆಪಡಿಸಿದ ಸಹೋ. ಜೋವೆಲ್ ಸಿರಿ ಮತ್ತು ಶ್ರೀಮತಿ ರಶ್ಮಿಸಿರಿ ಅವರಿಗೂ ನಮ್ಮ ವಿಶ್ವವಾಣಿ ತಂಡದವರಿಗೂ ನಾನು ವಂದಿಸುತ್ತೇನೆ, ಈ ಕೂಟವನ್ನು ನಡೆಸಲು ಸ್ಥಳಾವಕಾಶ ಮಾಡಿಕೊಟ್ಟ ಆಶೀರ್ವಾದ ರಿಟ್ರೀಟ್ ಸೆಂಟರಿನ ಮಾಲೀಕರಾದ ಸುಂದರ್ ಮಾಳಗಿ ಮತ್ತು ಅವರ ಕುಟುಂಬಕ್ಕೂ ನಾನು ವೈಯಕ್ತಿಕವಾಗಿ ವಂದನೆ ಸಲ್ಲಿಸುತ್ತೇನೆ. ವಿಶೇಷವಾಗಿ ಈ ಕೂಟದಲ್ಲಿ ಭಾಗವಹಿಸಿ ಸೇವೆಯನ್ನು ಪ್ರೋತ್ಸಾಹಿಸಿದ ಎಲ್ಲಾ ಸೇವಾದಾನಿಗಳಿಗೂ ಈ ಕೂಟವನ್ನು ಪ್ರಾರ್ಥನಾ ಪೂರ್ವಕವಾಗಿ ಮುಕ್ತಾಯಗೊಳಿಸಿದ ನಮ್ಮ ಸೇವೆಯ ಪಾಲುದಾರರಾದ ಐ.ಸಿ.ಆರ್.ಎಂ. ಸಭೆಯ ಸಭಾಪಾಲಕರಾದ ಪಾಸ್ಟರ್ ಮೋಹನದಾಸ್ ರವರಿಗೂ ನಾನು ವಂದನೆಗಳನ್ನು ನಾನು ಸಲ್ಲಿಸುತ್ತೇನೆ.

ಇಂತಿ ಕರ್ತನ ಸೇವೆಯಲ್ಲಿ ನಿಮ್ಮ ಸಹೋದರ

**ಘನ. ಎಂ. ಭದ್ರಿನಾಥ**

# 2023–2024 ರಲ್ಲಿ 85 ಕ್ಷೇತ್ರಗಳು ಸಭಾಕಟ್ಟಡಗಳನ್ನು ಪಡೆದಿರುವವು

ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲೂ ಅವರ ಮಂಡಲಿಗೆ ಸೇರಿಸುತ್ತಿದ್ದನು. ಅ.ಕೃ. 2:47. ಜೀವಕರವಾದ ಈ ವಾಕ್ಯವು ವಿಶ್ವವಾಣಿಯ ಸೇವಾ ಕ್ಷೇತ್ರಗಳಲ್ಲಿ ಅಕ್ಷರಷವಾಗಿ ಜರುಗುವದನ್ನು ನೋಡುವ ಸೌಭಾಗ್ಯವು ನಮಗೆ ದೊರೆತಿರುವದು. ಪ್ರತಿ ತಿಂಗಳೂ ಸೇವೆ ನಡೆಯುತ್ತಿರುವ ಹೊಸ ಕ್ಷೇತ್ರಗಳಲ್ಲಿ ಅಂದಾಜು 7 ಸಭಾಕಟ್ಟಡಗಳು ಪ್ರತಿಷ್ಠೆಯಾಗುತ್ತಿರುವವು. ಕರ್ತನ ಅದ್ಭುತ ಹಸ್ತವು ಕ್ಷೇತ್ರಗಳಲ್ಲಿ ಕಾರ್ಯಮಾಡುವದನ್ನು ನೋಡಿ ಆತನನ್ನು ಸ್ತುತಿಸುವ ಹಾಗೆ 1193 ಸೇವಾಪಾಲುಗಾರರು ಸೇವಾ ಸ್ಥಳಗಳನ್ನು ಸಂಧಿಸಿರುವರು.

85 ಸಭಾಕಟ್ಟಡಗಳ ಮುಂದೆ ನಿಂತಂಥ ಮೊದಲ ಸಂತಾನದ ವಿಶ್ವಾಸಿಗಳ ಭಾವಚಿತ್ರಗಳನ್ನು ನೀವು ಮೂರೂ ಪುಟಗಳಲ್ಲಿ ನೋಡುತ್ತಿದ್ದ ಹಾಗೆ ನಿಮ್ಮ ಹೃದಯಗಳು ಹರ್ಷಿಸುವವೆಂದು ನಂಬುವೆವು. ಈ ಸಭೆಗಳನ್ನು ನಿರ್ಮಿಸುವುದಕ್ಕೆ ಕರ್ತನಾದ ದೇವರು ಯಾವ ವಿಶ್ವಾಸಿಗಳನ್ನೂ ಹಾಗೂ ಅವರ ಮನೆಯವರನ್ನೂ ಉಪಯೋಗಿಸಿಕೊಂಡಿದ್ದಾನೋ ಅವರು ಶುಭಗಳನ್ನು ಹೊಂದುವವರಾಗಲಿ. ಇನ್ನೂ 129 ಕ್ಷೇತ್ರಗಳಲ್ಲಿ ಸಭಾಕಟ್ಟಡಗಳನ್ನು ಪೂರ್ಣಗೊಳಿಸಬೇಕಾಗಿರುವದು. ಅದಕ್ಕಾಗಿ ನಿಮ್ಮ ಪ್ರಾರ್ಥನೆಯ ಮತ್ತು ಸಹಾಯದ ಅವಶ್ಯಕತೆಯಿರುವದು. ಭಾರತದಲ್ಲಿ ಸೇವಾಕ್ಷೇತ್ರಗಳ ಸಂಖ್ಯೆಯು ಏರಿಕೆಯಾಗುವುದನ್ನು ಕಾಣುವ ಸುಗ್ಗಿಯ ಜಯಮಾನನು ಹರ್ಷಿಸಿ ಉಲ್ಲಾಸಪಡುವವನಾಗಲಿ.



01. ಸುರಪುವಾರಿಗುಡೆಂ, ಆ.ಪ್ರ. - 10.04.2023



02. ವೆಂಕಾಯಪಾಲೆಂ, ಆ.ಪ್ರ. - 12.04.2023



03. ವುಯಾಲಮಡುಗು, ಆ.ಪ್ರ. - 14.04.2023



04. ಕುಲಪಿತಾ, ಒಡಿಷಾ - 16.04.2023




05. ಹರಿಹರಪುರ, ಪಶ್ಚಿಮ ಬಂಗಾಳ - 16.04.2023


06. ಶೇಪುವಾಂಪಾ, ಗುಜರಾತ - 16.04.2023



07. ಬೊಂಡೂರು, ಆ.ಪ್ರ. - 23.04.2023



08. ರಾಸಿಕರಾಜಪುರ, ಒಡಿಷಾ - 28.03.2023


09. ಪತಾರಪಾಡ, ಒಡಿಷಾ - 29.04.2023


10. ಖುಂತಿಯಾತೊಲಾ, ಒಡಿಷಾ - 30.03.2023


11. ಮಾನಾಸಿಂಗ್‌ಪಾರಾ, ತ್ರಿಪುರ - 30.04.2023


12. ದುಸ್‌ಫೈಹಾ ಪಾರಾ, ತ್ರಿಪುರ - 06.05.2023



13. ಭಾಗೀರಥ ಕಾಮಿ, ತ್ರಿಪುರ - 07.05.2023



74. ಬಘುವಪಾಲ್, ಒಡಿಷಾ - 15.03.2024



75. ಲೋಂಗಿಲಿ, ಆ.ಪ್ರ. - 10.03.2024



76. ಪೊನುಗೋಡು, ತೆಲಂಗಣ - 20.03.2024



77. ಎಲುಮೇಟ, ಒಡಿಷಾ - 23.03.2024



78. ಸಯಿಂಡಾನಿಪಾಡಾ, ಮಹಾರಾಷ್ಟ್ರ - 23.03.2024



79. ವೈ. ಶ್ರೀರಾಮಪುರಂ, ಆ.ಪ್ರ. - 24.03.2024



80. ಡೊಕ್ರಿಪೊಡೋರ್, ಒಡಿಷಾ - 24.03.2024



81. ನಾಗಮ್ಮಗುಡ, ಆ.ಪ್ರ. - 24.03.2024




82. ಗುಲ್ತಾರೆ, ಮಹಾರಾಷ್ಟ್ರ - 30.03.2024



83. ಗಡಿಪಲ್ಲಿವಲಸ, ಆ.ಪ್ರ. - 30.03.2024



84. ಸೂರ್ಯನಗರಂ, ಆ.ಪ್ರ. - 31.03.2024



85. ತೊಟ್ಟಾಡಿ, ಆ.ಪ್ರ. - 31.03.2024

# ನಂಬಿಕೆಯೊಂದಿಗಿನ ಪ್ರಯತ್ನ



ಹಿಮಾಚಲ ಪ್ರದೇಶದ ಗುಡವಾಲ ಗ್ರಾಮದಲ್ಲಿ ನಾನು ಕೆಲವು ಮಹಿಳೆಯರು ಸಂತೋಷದಿಂದಲೂ ಹಾಗೂ ಸಮಾಧಾನದಿಂದಲೂ ಇರುವದನ್ನು ಕಂಡಿರುವೆನು. ಇದಕ್ಕೆ ಕಾರಣವೇನೆಂದು ನಾನು ವಿಚಾರಿಸಿದಾಗ, ಅವರಿಂದ ಬಂದ ಉತ್ತರವು "ದೇವರ ವಾಕ್ಯ" ವೆಂದು ಗೊತ್ತಾಯಿತು. ಅಂದಿನಿಂದ ನಾನು ಸಹ ಉಚಿತವಾಗಿ ದೊರೆಯುತ್ತಿರುವಂಥ, ಶಾಶ್ವತವಾದ ಸಂತೋಷವನ್ನು ಪಡೆಯುವದಕ್ಕೋಸ್ಕರ ಸತ್ಯವೇದ ಅಧ್ಯಯನ ತರಗತಿಯಲ್ಲಿ ಭಾಗವಹಿಸುವದಕ್ಕೆ ಪ್ರಾರಂಭಿಸಿದೆನು. ಸತ್ಯವೇದ ಅಧ್ಯಯನದ ಸಮಯದಲ್ಲಿ ನಾನು ಕ್ರಿಸ್ತನ ಪ್ರೀತಿಯಿಂದ ಸ್ಪರ್ಷಿಸಲ್ಪಟ್ಟವಳಾಗಿ ಪಾಪದ ಪರಿಹಾರವನ್ನು ಹಾಗೂ ರಕ್ಷಣೆಯ ಆನಂದವನ್ನೂ ಕರ್ತನಿಂದ ಪಡೆದವಳಾದೆನು. ಅಷ್ಟು ಮಾತ್ರವೇ ಅಲ್ಲ, ನಿತ್ಯತ್ವದಲ್ಲಿ ಸಮಾಧಾನವಾಗಿರಬೇಕೆಂದರೆ ಅತ್ಯಂತ ವಿಶೇಷವಾಗಿ ಸುವಾರ್ತೆಯನ್ನು ತಿಳುಕೊಂಡು ನಂಬುವವರಾಗಬೇಕೆಂಬದನ್ನು ಮನಗಂಡವಳಾದೆನು. ಹಾಗಾಗಿ ನನ್ನ ಗಂಡನು ಸಹ ಈ ಸಮಾಧಾನವನ್ನು ಅನುಭವಿಸುವವರಾಗಬೇಕೆಂದು ಬಯಸಿ, ಅದಕ್ಕಾಗಿ ಉಪವಾಸವಿದ್ದು ಪ್ರಾರ್ಥಿಸಿದೆ. ಯೇಸು ನನ್ನ ಪ್ರಾರ್ಥನೆಗೆ ಉತ್ತರವನ್ನು ದಯಪಾಲಿಸಿದನು. ಈಗ ನಾನೂ ಮತ್ತು ನನ್ನ ಮನೆಯವರೆಲ್ಲರೂ ಕರ್ತನನ್ನು ಆರಾಧಿಸುತ್ತಿರುವೆವು. ಆತನು ನಮ್ಮನ್ನು ಒಂದು ಕುಟುಂಬವಾಗಿ ಎಲ್ಲಾ ಆತ್ಮೀಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತಿರುವನು. ನನ್ನ ನೆರೆಹೊರೆಯವರೂ ಶಾಶ್ವತ ರಾಜ್ಯದಲ್ಲಿ ಭಾಗವಹಿಸುವವರಾಗಬೇಕೆಂದು ಅವರಿಗೆ ಸುವಾರ್ತೆಯನ್ನು ಸಾರುತ್ತಿರುವೆನು.

**ಜ್ಯೋತಿ, ಹೊಸ ವಿಶ್ವಾಸಿ**

# ವಿಶೇಷ ಮನವಿ



ಕರ್ತನಲ್ಲಿ ಪ್ರೀತಿಯುಳ್ಳ ಸೇವಾದಾನಿಗಳೇ, ಕರ್ತನ ಮಹಾಕೃಪೆಯಿಂದ ಕರ್ನಾಟಕ ರಾಜ್ಯದಲ್ಲಿ ಸೇವೆಯು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿರವದು. ಅನೇಕ ಆತ್ಮಗಳು ಕರ್ತನ ಮಂದೆಗೆ ಸೇರಿಸಲ್ಪಡುತ್ತಿರುವುದಕ್ಕಾಗಿ ನಾನು ದೇವರಿಗೆ ಸ್ತೋತ್ರ ಸಲ್ಲಿಸುವವನಾಗಿದ್ದೇನೆ.

ಪ್ರಿಯರೇ ಕರ್ನಾಟಕದಲ್ಲಿ ಕಳೆದ 40 ವರ್ಷಗಳಿಂದಲೂ ನಾವು ಸೇವೆ ಸಲ್ಲಿಸುತ್ತಿದ್ದೇವೆ ಹಾಗೂ ಕಳೆದ 40 ವರ್ಷಗಳಿಂದಲೂ ನಾವು ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಈಗ ಈ ಕಟ್ಟಡವು ತುಂಬಾ ಹಳೆಯದಾಗಿ ಶಿಥಿಲ ಗೊಂಡಿರುವುದು. ಆದದರಿಂದ ಇದನ್ನು ನಾವು ಸಂಪೂರ್ಣ ನೆಲಸಮಮಾಡಿ, ನೂತನ ಕಟ್ಟಡ ಕಟ್ಟಲು ಪ್ರಾರ್ಥನಾ ಪೂರ್ವಕವಾಗಿ ಸಿದ್ಧತೆ ಮಾಡಿಕೊಳ್ಳುತ್ತಿರುವೆವು. ನೂತನ ಕಟ್ಟಡಕ್ಕಾಗಿ ನಮಗೆ ಹೆಚ್ಚು ಕಡಿಮೆ 1 ಕೋಟಿ 30 ಲಕ್ಷಗಳ ಹಣಕಾಸಿನ ಅವಶ್ಯಕತೆಯಿರುವದು. ಆದುದರಿಂದ ಈ ಕಟ್ಟಡದ ಸಹಾಯಕ್ಕಾಗಿ ನಿಮ್ಮ ಸಹಾಯ ಹಸ್ತವನ್ನು ಚಾಚಬೇಕೆಂದು ಪ್ರೀತಿಯಿಂದ ನಿಮ್ಮನ್ನು ಕೇಳಿಕೊಳ್ಳುತ್ತೇವೆ.

**ಘನ. ಎಂ. ಭದ್ರಿನಾಥ, ಕರ್ನಾಟಕ ರಾಜ್ಯ ಸಂಯೋಜಕರು**

# ವಾಕ್ಯವು ಬೆಳಕಾಗಿರುವದು



ನನ್ನ ಹೆಸರು ಜಾನ್ ಎಂಬದಾಗಿ. ಒಬ್ಬ ಶಿಷ್ಯನ ಹೆಸರಾಗಿದ್ದರೂ ನನಗೂ ಯೇಸುವಿಗೂ ನಡುವೆ ಬಹುದೊಡ್ಡ ಅಂತರವಿತ್ತು. ನಾನು ಅಪೇಕ್ಷಿಸಿದ್ದೆಲ್ಲವೂ ನನ್ನ ಹತ್ತಿರವಿತ್ತು. ಆದರೂ ನಾನು ಲೋಕದ ವ್ಯರ್ಥತ್ವದಲ್ಲಿ ಸಿಕ್ಕಿಕೊಂಡವನಾಗಿ ಮಾನಸೀಕವಾಗಿ ಅಸ್ವಸ್ಥನಾಗಿದ್ದೆನು. ಅಂಥ ಸಂದರ್ಭದಲ್ಲಿ ನಾನು ಜೀವಸ್ವರೂಪನಾದ ದೇವರನ್ನು ಹುಡುಕಲು ಪ್ರಾರಂಭಿಸಿದವನಾದೆ. ದೇವರನ್ನು ಹುಡುಕುವವನಾದ ನಾನು ಒಮ್ಮೆಯಲ್ಲ, ಎರಡಾವರ್ತಿಯಲ್ಲ ಸಾಕಷ್ಟು ಸಲ ನಾನು ವಿಫಲತೆಗಳನ್ನು ಎದುರಿಸುವವನಾದೆನು.

ಒಮ್ಮೆ ನನ್ನ ಸ್ನೇಹಿತನ ಮೂಲಕ ಛತ್ತೀಸ್‌ಘರ್ ರಾಜ್ಯದ ಸಲೈನಗರ ಕ್ಷೇತ್ರದ ಮಿಷಿನರಿಯ ಮೂಲಕ ಬೋಧನೆಯನ್ನು ಆಲಿಸುವಂಥ ಅವಕಾಶವು ದೊರೆಯಿತು. ಜೀವನದಲ್ಲಿ ಪ್ರಪ್ರಥಮ ಸಲ ನಾನು ಸತ್ಯವೇದದಿಂದ ದೇವರ ವಾಕ್ಯವನ್ನು ಆಲಿಸಿದೆ. ನನ್ನ ಹೃದಯದಲ್ಲಿ ಕಳವಳವನ್ನುಂಟು ಮಾಡುತ್ತಿದ್ದ ಪ್ರತಿಯೊಂದು ಪ್ರಶ್ನೆಗೂ ಉತ್ತರವನ್ನು ಪಡೆದವನಾದೆನು. ಯೇಸುವಿನ ನಾಮದಲ್ಲಿ ನಾನು ಬೆಳಕನ್ನು ಪಡೆದುಕೊಂಡೆನು. ಪರಲೋಕದ ದೇವರು ಈ ಭೂಲೋಕಕ್ಕೆ ಹೇಗೆ ಬಂದನೆಂಬ ನನ್ನ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿರುವೆನು. ನಾನು ಸಾಯುವವರೆಗೂ ಯೌವನಸ್ಥರಿಗೆ ದೇವರ ವಾಕ್ಯವನ್ನು ಹಂಚುವೆನೆಂದು ಒಪ್ಪಿಸಿಕೊಂಡಿರುವೆನು.

**ಜಾನ್ ಬೆಕ್, ಛತ್ತೀಸ್‌ಘರ್**

# ಯಾವುದು ಪ್ರಾಮುಖ್ಯ?

## ಪ್ರಾರಂಭಿಸುವದೋ?
## ಮುಂದುವರಿಸುವದೋ?
## ಮುಕ್ತಾಯ ಮಾಡುವದೋ?

ಘನ. ಡಾ. ಇಮ್ಮಾನುವೇಲ ಜ್ಞಾನರಾಜ,
ಪ್ರಾರ್ಥನಾ ಜಾಲ ಸೇವೆಯ ನಿರ್ದೇಶಕರು

ಇದು ಮೂರು ಪಕ್ಷಗಳವರು ತಮ್ಮ ಅಭಿಪ್ರಾಯಗಳನ್ನು ಸುರಿಯ ಮಾಡುವಂಥ ಚರ್ಚೆಯಲ್ಲ. ಬಿತ್ತುವದರ, ಬೆಳೆಯುವದರ ಹಾಗೂ ಸುಗ್ಗಿ ಮಾಡುವದರ ಬಗ್ಗೆ ನಾವು ವಿವರಿಸುವದಿಲ್ಲ, ಬದಲಿಗೆ ಸುವಾರ್ತಾ ಸೇವೆ ಅಂದರೆ ಏನು? ಅದನ್ನು ಹೇಗೆ ಮಾಡುವಂಥದ್ದು? ಇದರಲ್ಲಿ ನಮ್ಮ ಪಾತ್ರವೇನು? ಎಂಬ ಪ್ರಶ್ನೆಗಳಿಗೆ ಈ ಲೇಖನದಿಂದ ಉತ್ತರವನ್ನು ಕಂಡುಕೊಳ್ಳುವದಾಗಿದೆ.

ಕೊರಿಂಥದವರಿಗೆ 1ನೇ ಪತ್ರಿಕೆ 3ನೇ ಅಧ್ಯಾಯದಲ್ಲಿ ಅಪೊಸ್ತಲನಾದ ಪೌಲನು ಸುವಾರ್ತಾ ಸೇವೆಯಲ್ಲಿ ತನ್ನ ಪಾತ್ರವೇನೆಂದೂ ಹಾಗೂ ಈ ದರ್ಶನದ ಬಗ್ಗೆ ಜನರು ಮುಂದೇನು ಮಾಡಬೇಕೆಂದೂ ತಿಳಿಸಿರುವನು. ಆ ದಿನಗಳಲ್ಲಿ ಕೊರಿಂಥದ ಸಭೆಯಲ್ಲಿ ದ್ವೇಷ, ಹಗೆತನ ಹಾಗೂ ಹೊಟ್ಟೇಕಿಚ್ಚುಗಳು ಕಂಡು ಬಂದಿದ್ದವು. ಅಪೊಸ್ತಲನಾದ ಪೌಲನು ಆ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಹೇಗೆ ಜಯ ಹೊಂದಿದನೆಂದು ತಿಳಿದುಕೊಳ್ಳೋಣ. ಈ ದಿನಗಳಲ್ಲಿಯೂ ನಾವು ಸಭೆಗಳಲ್ಲಿ ಗರ್ವ ಹಾಗೂ ಜಗಳಗಳಿರುವದಾಗಿಯೂ ಮತ್ತು ಅದರ ಪರಿಣಾಮವಾಗಿ ಸಂಖ್ಯೆ ಬೆಳೆದ ಹಾಗೆಲ್ಲಾ ಬೇಧಗಳುಂಟಾಗುವುದನ್ನು ಕಾಣುತ್ತಿರುವೆವು. ಈ ಅಧ್ಯಾಯದಲ್ಲಿ ಪೌಲನು ಪರಿಹಾರವನ್ನು ತಿಳಿಸಿದ್ದಾನೆಂದು ಗಮನಿಸೋಣ. 1 ಕೊರಿಂಥ. 1:13ನೇ ವಚನವನ್ನು ಗಮನಿಸಿರಿ. ಕ್ರಿಸ್ತನು ವಿಭಾಗವಾಗಿದ್ದಾನೋ? ನಾವು ಕರ್ತನಿಗಾಗಿ ಕೆಲಸ ಮಾಡುವವರಾದ ಕಾರಣ ಹೆಮ್ಮೆ ಪಡುವದಕ್ಕೆ ಏನೂ ಇಲ್ಲ. ಇದು ಕ್ರಿಸ್ತನ ದೇಹವಾಗಿರುವ ಮತ್ತು ಸಭೆಯ ಭಾಗವಾಗಿರುವ ವಿಶ್ವಾಸಿಗಳಿಗೆ ಮಾತ್ರ ಎಚ್ಚರಿಕೆಯಾಗಿ ತಿಳಿಸಿರುವದು.

ಸುವಾರ್ತೆ ಸಾರುವಂಥದ್ದು ನಮ್ಮ ಕರ್ತವ್ಯವಾಗಿರುವದು. ಸುವಾರ್ತೆ ಸಾರುವವರಾದ ನಮಗೆ ಯಾವದರ ಬಗ್ಗೆಯೂ ಹೊಗಳಿಕೊಳ್ಳಬೇಕಾಗಿಲ್ಲ. ಇತರರಿಗಿಂತ ಯಾರೊಬ್ಬರೂ ಉತ್ತಮರಾಗಿಲ್ಲ. ಆದದರಿಂದಲೇ ಪೌಲನು ಕೊರಿಂಥ ಸಭೆಯಲ್ಲಿದ್ದ ಭೇದಗಳನ್ನು ತೆಗೆದುಹಾಕುವಂತೆ ತಿಳಿಸಿರುವನು. 1 ಕೊರಿಂಥ 3:5 "ಹಾಗಾದರೆ ಅಪೊಲ್ಲೋಸನು ಏನು ಪೌಲನು ಏನು? ಅವರು ಸೇವಕರು. ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ."

**ಸಸಿ ನೆಡುವದು ಅಂದರೆ ಏನು?:** ಯಾವಾಗಲೂ ನಾವು ಆದಿಕಾಂಡ 8:22 ರ ಮೇಲೆ ಆಧಾರವಾಗಿರುವಂಥ "ಬಿತ್ತನೆಯೂ ಕೊಯಿಲೂ ಇವುಗಳ ಕ್ರಮ ತಪ್ಪುವದೇ ಇಲ್ಲ" ಎಂಬ ಹಾಡನ್ನು ನೆನಪು ಮಾಡಿಕೊಳ್ಳುವವರಾಗಿದ್ದೇವೆ. ನಾವು ನೆಡುವವರು ಇಲ್ಲವೆ ಬಿತ್ತುವವರು ಆಗಿರಬೇಕು. ಯೇಸು ಕ್ರಿಸ್ತನು ನಮ್ಮ ಪಾಪಗಳನ್ನು ಕ್ಷಮಿಸುವದಕ್ಕೆ ಈ ಲೋಕಕ್ಕೆ ಬಂದನು ಹಾಗೂ ಆತನನ್ನು ನಂಬಿ ಅಂಗೀಕರಿಸಿಕೊಳ್ಳುವವರು ನಿತ್ಯಜೀವವನ್ನು ಹೊಂದುವರೆಂದು ಸಾರುವ ಸುವಾರ್ತೆಯು ಇದು ಆರಂಭವಷ್ಟೇ. ಈ ಪ್ರಸಾರದ ಅವಶ್ಯಕತೆಯಿದೆಯಾ? ಇದು ಇತರ ಎರಡು ಸೇವೆಗಳಿಗಿಂತಲೂ ಹೆಚ್ಚಿನದ್ದಾಗಿರುವದೋ? ಎಂಬೀ ವಿಷಯಗಳ ಬಗ್ಗೆ ಚರ್ಚಿಸುವಂಥ ಅವಶ್ಯಕತೆಯಿರುವದಿಲ್ಲ. ರೋಮಾ.

10:14 ಹೀಗೆ ಹೇಳುತ್ತದೆ: ಆದರೆ ತಾವು ಯಾವನನ್ನು ನಂಬಲಿಲ್ಲಲೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ? ಎಂಬದಾಗಿ. ಆದದರಿಂದ ಸುವಾರ್ತೆಯನ್ನು ಸಾರುವದು ಬಹು ಮಹತ್ವದ್ದಾಗಿರುವದು.

ಈ ದಿವಸಗಳಲ್ಲಿ ಸಾರಿದ ಸ್ಥಳಗಳಲ್ಲಿಯೇ ಪದೇ ಪದೇ ಸುವಾರ್ತೆಯನ್ನು ಸಾರಲಾಗುತ್ತಿದೆ. ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡವರಿಗೆ ಮತ್ತೆ ಮತ್ತೆ ಸುವಾರ್ತೆಯನ್ನು ಸಾರಿದರೆ, ಸುವಾರ್ತೆಯನ್ನರಿಯದಿರುವವರು ಯಾವಾಗ ಅದನ್ನು ಅರಿಯುವವರಾಗಬೇಕು? ಯೇಸುವನ್ನು ಅಂಗೀಕರಿಸಿಕೊಂಡು ಆತನನ್ನು ಅರಿಕೆಮಾಡಿಕೊಳ್ಳುವಂಥ ಅವಕಾಶವು ಅವರಿಗೆ ಯಾವಾಗ ದೊರೆಯಬೇಕು? ಅರಿತವರು ಸಾರದಿದ್ದರೆ ಅರಿಯದವರು ತಿಳಿಯುವುದೆಲ್ಲಿ? ಎಂಬದಾಗಿ ಎಮಿಲ್ ಅಣ್ಣನವರು ಬಹು ಸುಂದರವಾಗಿ ಹಾಡನ್ನು ರಚಿಸಿರುವರು. ಹೌದು ಸುವಾರ್ತೆಯನ್ನು ಕೇಳದವರು ಅದನ್ನು ನಂಬುವದು ಹೇಗೆ? ಈ ದಿನ ನಾವು ಸಮೃದ್ಧಿಯಾದ ಸುಗ್ಗಿಗಾಗಿ ಸುವಾರ್ತೆಯನ್ನು ಸಾರುತ್ತೇವೆಂದು ತೀರ್ಮಾನಿಸುವವರಾಗೋಣ. ಪೌಲನ ಹಾಗೆ ನಾವು ಎಷ್ಟರ ಮಟ್ಟಿಗೆ ಸುವಾರ್ತೆ ಅರಿಯದವರಿಗೆ ಸುವಾರ್ತೆಯನ್ನು ತಿಳಿಸಲು ತೊಡಗಿಸಿಕೊಂಡಿದ್ದೇವೆಂಬದರ ಬಗ್ಗೆ ಆಲೋಚಿಸು ವವರಾಗೋಣ (2 ಕೊರಂಥ 10:16). ನಾವು ಸರಿಯಾದ ಸ್ಥಳದಲ್ಲಿ ಬಿತ್ತುತ್ತಿರುವೆವೋ? ದೇವರ ವಾಕ್ಯವನ್ನು ಬಿತ್ತುವುದರ ಬಗ್ಗೆ ನಾವು ಸರಿಯಾದ ಸ್ಥಳವನ್ನು ಆಯ್ಕೆಮಾಡಿಕೊಳ್ಳುದರಲ್ಲಿ ಜಾಗರೂಕರಾಗಿರಬೇಕು. ಅದು ಒಳ್ಳೇ ಭೂಮಿಯೋ ಅಥವಾ ಬಂಡೆ ನೆಲವೋ? ಬೀಜವನ್ನು ಬಿತ್ತುವ ಕೆಲಸದಲ್ಲಿ ಪ್ರಾರ್ಥನೆಯು ಪ್ರಧಾನವಾಗಿರುವದು. ನಾವು ಯಾವ ಗ್ರಾಮಗಳ ಆತ್ಮಗಳಿಗೆ ಸುವಾರ್ತೆಯನ್ನು ಸಾರುವೆವೋ ಆ ಗ್ರಾಮಗಳಿಗಾಗಿ ಸತತವಾಗಿ ಪ್ರಾರ್ಥಿಸುವವರಾಗಬೇಕು. ಲುದ್ಯಳ ಹೃದಯವನ್ನು ತೆರೆದ ಹಾಗೆ ಪರಿಶುದ್ಧಾತ್ಮನು ಜನರ ಹೃದಯಗಳನ್ನು ತೆರೆಯಬೇಕು. ಆಗಲೇ ಬಿತ್ತುವ ಸೇವೆಯು ಪೂರ್ಣಗೊಳ್ಳುವದು. ಪೌಲನು ದೇವರ ವಾಕ್ಯವನ್ನು ಬಿತ್ತುತ್ತಾ ಸೇವೆಯನ್ನು ಮಾಡಿದವನಾದನು.

**ನೀರು ಹೊಯ್ಯುವದು ಅಂದರೆ ಏನು?:** ನೀರು ಹೊಯ್ಯುವದು ಅಂದರೆ ಸರಿಯಾಗಿ ನೆಡುವದಾಗಲಿ ಸರಿಯಾಗಿ ಸೇವೆ ಮಾಡುವದಾಗಲಿ ಅಲ್ಲ. ದೇವರ ವಾಕ್ಯವನ್ನು ಎಲ್ಲಿ, ಯಾರಿಗೆ ಸಾರಿದ್ದೇವೆಂಬದರ ಬಗ್ಗೆ ನಮಗೆ ತಿಳಿದಿರಬೇಕು. ನಮ್ಮ ತೃಪ್ತಿಗಾಗಿ ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ಮಾಡಿ ಮುಗಿಸಿದ್ದೇವೆಂದು ಹೇಳಿಕೊಂಡರೆ ಅದು ಸರಿಯಾದ ಕ್ರಮವಲ್ಲ. ಸುವಾರ್ತಾ ಸೇವೆಯನ್ನು ವ್ಯವಸ್ಥಿತವಾಗಿ ಮಾಡಿದ ನಂತರ ಅದಕ್ಕೆ ಅನುಸರಿಸಿ ಹಿಂದೆಯೇ ಮಾಡುವ ಅನುಕರಣ ಸೇವೆಯೇ ನೀರು ಹೊಯ್ಯುವದು. ವಿಶ್ವವಾಣಿ ಸೇವೆಯಲ್ಲಿರುವ ಮಿಷಿನರಿಗಳ ಕೆಲಸವನ್ನು ಗಮನಿಸಿರಿ, ಅವರನ್ನು 5 ಗ್ರಾಮಗಳ ಸೇವೆಗಾಗಿ ನೇಮಿಸಲಾಗುತ್ತದೆ. ಮಿಷಿನರಿಗಳು ವಾರಕ್ಕೊಮ್ಮೆ ನಿರ್ಧಿಷ್ಟವಾದ ಒಂದು ದಿನ 5 ಗ್ರಾಮಗಳನ್ನು ಸಂಧಿಸಿ ಜನರೊಂದಿಗೆ ಸಂಪರ್ಕವನ್ನು ಇರಿಸಿಕೊಳ್ಳುವರು. ಇದು ಮೊದಲನೇ ಹಂತದ ಕೆಲಸವಾಗಿರುವದು. ತನ್ನ ಸಂಪರ್ಕದಲ್ಲಿ ಬರುವವರನ್ನು ಮಿಷಿನರಿಯು ಅನ್ವೇಷಕರ ಕೂಟಗಳಿಗೆ ಆಮಂತ್ರಿಸಿ ನಂತರ ಆಸಕ್ತಿಯುಳ್ಳವರನ್ನು ಸತ್ಯವೇದ ಅಧ್ಯಯನ ತರಗತಿಗಳಿಗೆ ಕರೆಯುವನು. ಸತ್ಯವೇದ ಅಧ್ಯಯನ ತರಗಿತಗಳ ಮೂಲಕ ಜನರು ದೇವರ ವಾಕ್ಯದ ಜ್ಞಾನವನ್ನು ಪಡೆಯುವರು. ಇದುವೇ ನೀರು ಹೊಯ್ಯುವ ಸೇವೆಯು. ಹೌದು, ಒಮ್ಮೆ ದೇವರ ವಾಕ್ಯವನ್ನು ಆಲಿಸಿದ ವ್ಯಕ್ತಿಗೆ ಹಿಂದೆಯೇ, ಅಂದರೆ ಒಡನೆಯೇ ಅನುಕರಿಸುವದು ಅವಶ್ಯವು. ಅಪೊಲ್ಲೋಸನು ನೀರು ಹೊಯ್ಯುವ ಕೆಲಸವನ್ನು ಮಾಡಿದನು. ಕ್ರಮವಾಗಿ

ಸತ್ಯವೇದ ಅಧ್ಯಯನಗಳಲ್ಲಿ ಭಾಗವಹಿಸುವವರು ತಮ್ಮ ಹೃದಯವನ್ನು ಯೇಸುವಿಗಾಗಿ ತೆರೆಯುವರು ಹಾಗೂ ತಮ್ಮ ಪಾಪಗಳು ಪರಿಹಾರವಾಗಿದೆ ಎಂಬ ಭರವಸೆಯನ್ನು ಹೊಂದುವರು. ಅದರ ನಂತರ ತನ್ನ ನಂಬಿಕೆಯನ್ನು ಅರಿಕೆಮಾಡಿಕೊಳ್ಳುವನು. ನಂಬಿಕೆಯನ್ನು ಅರಿಕೆಮಾಡಿಕೊಂಡಂಥ ವ್ಯಕ್ತಿಯು ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯನಾಗಿ ಕರ್ತನನ್ನು ಆರಾಧಿಸುವವನಾಗುವನು. ಈ ಕ್ರಮವನ್ನೇ ನಾವು ನಮ್ಮ ಸೇವಾಕ್ಷೇತ್ರಗಳಲ್ಲಿ ಅನುಸರಿಸುವೆವು. ನೀವು ನಿಮ್ಮ ಸ್ಥಳಗಳಲ್ಲಿಯೂ ಸುವಾರ್ತೆಯನ್ನರಿಯದಿರುವ ನಿಮ್ಮ ಸ್ನೇಹಿತರಿಗೆ ಸುವಾರ್ತೆಯನ್ನು ಸಾರುವವರಾಗಬಹುದು. ಅವರನ್ನು ವಿಶ್ವಾಸ ಜೀವಿತಕ್ಕೆ ನಡಿಸುವದರ ಮೂಲಕ ಅವರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಳ್ಳುವಂತೆ ಮಾಡಬಹುದು. ಈ ಕ್ರಮವನ್ನು ನಾವು ಅನುಸರಿಸುವವರಾದರೆ ನಾವು ಜ್ಞಾನಿಗಳು. ಪೌಲನು ಸಸಿಯನ್ನು ನೆಟ್ಟಂಥ ಎಲ್ಲಾ ಸ್ಥಳಗಳಲ್ಲಿಯೂ ಅಪೊಲ್ಲೋಸನು ಅನುಸರಿಸುವವನಾಗಿ ನೀರು ಹೊಯ್ಯುವ ಕೆಲಸವನ್ನು ಮಾಡಿದನು.

**ಬೆಳೆಯುವಂತೆ ಮಾಡಿದ್ದು ಯಾವದು?:** ಕರ್ತನು ರಕ್ಷಣೆಯ ಮಾರ್ಗದಲ್ಲಿರುವವನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು. (ಅ.ಕೃ. 2:47). ಯೇಸು ಕ್ರಿಸ್ತನು ಮತ್ತಾಯ 16:16–18 ರಲ್ಲಿ "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" ಎಂದು ಹೇಳಿರುವನು. ಯಾರ ಪಾಪಗಳು ಪರಿಹಾರವಾಗಿವೆಯೋ ಹಾಗೂ ಯಾರು ಆ ನಾಮವನ್ನು ನಂಬುವರೋ ಅಂಥವರನ್ನು ಪರಿಶುದ್ಧಾತ್ಮನು ಸಭೆಯ ಸದಸ್ಯರನ್ನಾಗಿ ಮಾಡುವನು. ದೇವರ ಮಕ್ಕಳಾಗಿರುವ ಅವರ ಮೂಲಕ ಆತ್ಮಗಳ ಸುಗ್ಗಿಯು ಹೆಚ್ಚುತ್ತಾ ಹೋಗುವದು. ಪರಿಶುದ್ಧಾತ್ಮನ ಮೊದಲ ಹಂತದ ಸೇವೆಯು ಲೋಕಕ್ಕೆ ಪಾಪ ನೀಡಿ ನ್ಯಾಯತೀರ್ವಿಕೆಯ ಬಗ್ಗೆ ಅರುಹನ್ನುಂಟು ಮಾಡುವದಾಗಿದೆ (ಯೋಹಾನ 16:8–11). ಎರಡನೇದಾಗಿ ಹೃದಯದಲ್ಲಿ ಅಲುಗು ನೆಡುವಂತೆ ಮಾಡಿ ಯೇಸುವನ್ನು ಅಂಗೀಕರಿಸಿಕೊಳ್ಳುವವರನ್ನಾಗಿ ಮಾಡುವದು (ಅ.ಕೃ. 2:37–28). ಮೂರನೇ ಹಂತದಲ್ಲಿ ವಿಶ್ವಾಸಿಗಳೆಲ್ಲರೂ ಒಂದೆಡೆ ಸೇರಿಬಂದು ಕರ್ತನನ್ನು ಆರಾಧಿಸುವವರಾಗಿ ಅನ್ಯೋನ್ಯತೆಯನ್ನು ಅನುಭವಿಸುವಂತೆ ಮಾಡುವದು (ಅ.ಕೃ. 13:1–3). ನಾಲ್ಕನೇ ಹಂತದಲ್ಲಿ ಮಿಷಿನರಿಗಳ ಜವಾಬ್ದಾರಿಕೆಯನ್ನು ಹೊತ್ತುಕೊಳ್ಳುವವರಾಗಿ ಅವರನ್ನು ಸೇವಾಕ್ಷೇತ್ರಗಳಿಗೆ ಕಳುಹಿಸಿಕೊಡುವಂತೆ ಮಾಡುವದಾಗಿದೆ. ಪರಿಶುದ್ಧಾತ್ಮನ ಮೂಲಕ ಕರ್ತನು ನಮ್ಮೆಲ್ಲರನ್ನೂ ಸುವಾರ್ತಾ ಸೇವೆಯಲ್ಲಿ ಬಲವಾಗಿ ಉಪಯೋಗಿಸಿಕೊಳ್ಳುವವನಾಗಲಿ. ■

# ಅವಶ್ಯಕತೆಯು ಕರೆಯುತ್ತಿರುವದು

ಆತ್ಮಗಳ ಆದಾಯದ ಸೇವೆಯಲ್ಲಿ ಹಗಲೂ ರಾತ್ರಿ ಸೇವಾ ಕ್ಷೇತ್ರಗಳಲ್ಲಿ ಫಲವನ್ನು ಪಡೆಯುವದಕ್ಕಾಗಿ ಅಭಿವೃದ್ಧಿ ಸೇವಕರಿಗೆ ತಮ್ಮ ಕೆಲಸವನ್ನು ತೀವ್ರಗೊಳಿಸಲು ಅನೇಕ ಅವಶ್ಯಕತೆಗಳು ಅವಶ್ಯವಾಗಿರುವವು. ಕೆಳಗಿನ ಪಟ್ಟಿಯು ಮಹತ್ವದ ಅವಶ್ಯಕತೆಗಳ ಬಗ್ಗೆ ತಿಳಿಸುವದು. ಪ್ರಾರ್ಥನಾ ಪೂರ್ವಕವಾಗಿ ಅವಶ್ಯಕತೆಗಳ ಬಗ್ಗೆ ಓದಿರಿ ಪಾಲುಗಾರರಾಗಿರಿ ಹಾಗೂ ಆಶೀರ್ವದಿಸಲ್ಪಡಿರಿ.

ರೂ. 500x5000 ಕೊಕ್‌ಬೊರೊಕ್ ಸತ್ಯವೇದಗಳು – ರೂ. 25,00,000/– ಅವಶ್ಯವಿದೆ.
ರೂ. 6,000x225 ಸೈಕಲ್‌ಗಳಿಗೆ – ರೂ. 6,60,000/– ಅವಶ್ಯವಿದೆ.
ರೂ. 1000x660 ಸಂಗೀತ ಉಪಕರಣಗಳು – ರೂ. 6,60,000/– ಅವಶ್ಯವಿದೆ.
ರೂ. 500x1300 ಜಮಖಾನೆಳು / ಹಾಸುಗಳು – ರೂ. 6,50,000/– ಅವಶ್ಯವಿದೆ.
ರೂ. 200x600 ಕೈದೀಪಗಳು – ರೂ. 1,20,000/– ಅವಶ್ಯವಿದೆ.
ರೂ. 75,000x50 ದ್ವಿಚಕ್ರವಾಹನಗಳು – ರೂ. 37,50,000/– ಅವಶ್ಯವಿದೆ.
ರೂ. 20,000x200 ಧ್ವನಿವರ್ಧಕ ಉಪಕರಣ – ರೂ. 50,00,000/– ಅವಶ್ಯವಿದೆ.



# ಕ್ಷೇತ್ರ ಸಮಾಚಾರ

## ಸ್ತುತಿಸಿರಿ – ಪ್ರಾರ್ಥಿಸಿರಿ

**“ಯೆಹೋವನಿಗೆ ಹೊಸ ಕೀರ್ತನೆಯನ್ನು ಹಾಡಿರಿ; ಎಲ್ಲಾ ಭೂನಿವಾಸಿಗಳೇ, ಯೆಹೋವನಿಗೆ ಹಾಡಿರಿ.” ಕೀರ್ತನೆ 98:1**

## 01. ಪಂಜಾಬ

**ಸ್ತುತಿಸಿರಿ:** 12 ಜನ ಯೌವನಸ್ಥರು ಹೊಸ ಬದುಕನ್ನು ಪ್ರಾರಂಭಿಸಿರುವರು ಹಾಗೂ ದೇವರ ಪ್ರೀತಿಯನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿರುವರು. ಯೇಸುವೇ ತಮ್ಮ ರಕ್ಷಕನೆಂದು 52 ಜನರು ಅರಿಕೆ ಮಾಡಿಕೊಂಡಿರುವರು. ಬಹಿರಂಗ ಕೂಟದ ಮೂಲಕ ಸ್ಪರ್ಷಿಸಲ್ಪಟ್ಟವರಾದ 50 ಮನೆಗಳವರು ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. 20 ಯೌವನಸ್ಥರು ತಮ್ಮನ್ನು ಪೂರ್ಣಾವಧಿ ಸೇವೆಗೆ ಸಮರ್ಪಿಸಿಕೊಂಡಿರುವರು. ಕರ್ತನಿಗೆ ಸ್ತೋತ್ರ.

**ಪ್ರಾರ್ಥಿಸಿರಿ:** 15 ಗ್ರಾಮಗಳಲ್ಲಿ ಜರುಗಿದ ಯೌವನಸ್ಥರ ಕೂಟಗಳಿಗೆ ಸಂಬಂಧ ಪಟ್ಟಂತೆ ಅನುಕರಣ ಸೇವೆಯು ನಡೆಯುವಂತೆ, ಫಸ್‌ಮಂಡಿ ಕ್ಷೇತ್ರದಲ್ಲಿ ನಿರ್ಮಿಸುತ್ತಿರುವಂಥ ಸಭಾಕಟ್ಟಡವು ಪೂರ್ಣಗೊಳ್ಳುವಂತೆ, ಅನ್ವೇಷಕರ ಕೂಟಗಳ ಮೂಲಕ ರಕ್ಷಿಸಲ್ಪಟ್ಟಂಥ 40 ಹೊಸ ಜನರು ದೇವರ ವಾಕ್ಯದಲ್ಲಿ ಬಲಗೊಳ್ಳುವವರಾಗುವಂತೆ, ಮದ್ಯವ್ಯಸನಿಯಾಗಿರುವಂಥ ಜೊಗಿಂದರ್ ಎಂಬವರನ್ನು ಕರ್ತನು ಬಿಡುಗಡೆ ಮಾಡುವಂತೆ ಪ್ರಾರ್ಥಿಸಿರಿ.

## 02. ಉತ್ತರಖಂಡ

**ಸ್ತುತಿಸಿರಿ:** ಸುವಾರ್ತಾ ವಾಕ್ಯಗಳನ್ನು ಆಲಿಸಿದ ನಂತರ 74 ಜನರು ಯೇಸು ಕ್ರಿಸ್ತನನ್ನು ಹಿಂಬಾಲಿಸಲು ನಿರ್ಧರಿಸಿರುವರು. ಖತಿಮಾ ಪ್ರಾಂತ್ಯದಲ್ಲಿ ಹೊಸದಾಗಿ 11 ಆರಾಧನಾ ಗುಂಪುಗಳನ್ನು ರಚಿಸಲಾಗಿದೆ. ಎಲ್‌ಈಜಿ ಕೇಂದ್ರದ ಪ್ರಭಾವದಿಂದಾಗಿ 6 ಜನರು ಹೊಸದಾಗಿ ಸೇವೆಯಲ್ಲಿ ಸೇರ್ಪಡೆಯಾಗಿರುವರು. 79 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಅನ್ವೇಷಕರ ಕೂಟಗಳ ಮೂಲಕ ಪ್ರಭಾವಿತರಾಗಿ ಯೇಸುವನ್ನು ನಂಬುವದಕ್ಕೆ ಮುಂದೆ ಬಂದಿರುವಂಥ 49 ಜನರಿಗಾಗಿ, ವಿಶ್ವಾಸದರಿಕೆಗೆ ಸಿದ್ಧರಾಗುತ್ತಿರುವಂಥ 17 ಜನರಿಗಾಗಿ, ಶಿವಕುಮಾರ ಎಂಬ ಮಿಷಿನರಿಯು ಪಡುತ್ತಿರುವಂಥ ಪ್ರಯಾಸವು ಫಲಕಾರಿಯಾಗುವಂತೆ, ಕ್ಷಯರೋಗದ ಕಾರಣ ಬಾಧೆಪಡುತ್ತಿರುವಂಥ ಮನೀಷ್ ಕುಮಾರ ಎಂಬ ಮಿಷಿನರಿಯು ಸ್ವಸ್ಥತೆ ಹೊಂದುವಂತೆ ಪ್ರಾರ್ಥಿಸಿರಿ.

## 03. ಹರಿಯಾಣ

**ಸ್ತುತಿಸಿರಿ:** ಅಶ್ವರಪುರ ಗ್ರಾಮದ ಸೇವೆಗೆ ಪಿಂಕಿ ಎಂಬವರ ಮನೆಯವರು ಸಮಾಧಾನದ ಪಾತ್ರೆಯಾಗಿರುವರು. ಒಡ್ಡಾನ ಹಾಗೂ ಭಾಂಬೂರು ಎಂಬ ಸಿರ್ಸಾ ಜಿಲ್ಲೆಯ ಗ್ರಾಮಗಳ ಸೇವೆಯಲ್ಲಿ ಹೊಸ ಆತ್ಮಗಳು ದೊರೆಯುವಂತೆ, ಹೊಸದಾಗಿ 2 ಮನೆಗಳವರು ಶೇರ್‌ಗರ್ ಗ್ರಾಮದ ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. ಭೋರ್‍ಯಾಕೆರಾ ಗ್ರಾಮದ ರೋಹಿತ್ ಹಾಗೂ ಅವರ ಮನೆಯವರು ಯೇಸುವನ್ನು ಸೇವಿಸಲು ಒಪ್ಪಿಸಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಸೋನಿಪತ್ ಹಾಗೂ ಫತೇಬಾದ ಜಿಲ್ಲೆಗಳಲ್ಲಿ ಮುಂದುವರಿದಿರುವಂಥ ಸಮೀಕ್ಷಾ ಕೆಲಸವು ಸಫಲವಾಗುವಂತೆ, ರಣಜೀತ್ ಎಂಬವರ ಮನೆಯಲ್ಲಿ ಸಮಾಧಾನವು ನೆಲೆಸುವಂತೆ, ಧಾಂಡ್ ಕ್ಷೇತ್ರದ ವಿಶ್ವಾಸಿಗಳು ಆತ್ಮಕವಾಗಿ ಬೆಳೆಯುವವರಾಗುವಂತೆ, ಕೈತಾಳ್ ಮತ್ತು ಅಂಬಾಲ ಕ್ಷೇತ್ರಗಳಲ್ಲಿ ಪೂರ್ಣಾವಧಿ ಸೇವಕರು ದೊರೆಯುವಂತೆ ಪ್ರಾರ್ಥಿಸಿರಿ.

## 04. ರಾಜಸ್ತಾನ, ಬನ್ಸವಾರ ಪ್ರಾಂತ್ಯ

**ಸ್ತುತಿಸಿರಿ:** ದುರಾತ್ಮನ ಹಿಡಿತದಲ್ಲಿದ್ದ ಕಾಸರವಾಡಿ ಗ್ರಾಮದ ಕಾನಾ ಎಂಬವರನ್ನು ಯೇಸು ವಿಮೋಚಿಸಿರುವನು. ಮಾನಸೀಕ ಅಸ್ವಸ್ಥರಾಗಿದ್ದ ಶಿಲ್ಡಿಯಾ ಗ್ರಾಮದ ಹೀರಾ ಎಂಬವರನ್ನು ಯೇಸು ಗುಣಪಡಿಸಿರುವನು. ಖಾತು ಎಂಬವರು ಯೇಸುವನ್ನು ಅಂಗೀಕರಿಸಿಕೊಂಡಿರುವರು. ಅದರ ಪರಿಣಾಮವಾಗಿ ಕರ್ತನು ಅವರ ಕೈ ಕೆಲಸಗಳನ್ನು ಸಫಲಪಡಿಸಿ ಅವರ ಮನೆಯವರನ್ನು ರಕ್ಷಿಸಿರುವನು. 16 ಜನರು ತಮ್ಮ ನೂತನ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಜಿಲ್ಲಾ ಕೇಂದ್ರಗಳಲ್ಲಿ ಜರುಗಿದ ಕೂಟಗಳ ಮೂಲಕ ದೇವರ ವಾಕ್ಯಗಳು ಹೆಚ್ಚು ಮನೆಗಳವರಿಗೆ ತಲುಪುವಂತಾಗಲಿ, ಬನ್ಸವಾರ ಪ್ರಾಂತ್ಯದ 233 ಗ್ರಾಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಿಷಿನರಿಗಳಿಗಾಗಿ, ಗನೋಡ ಜಿಲ್ಲೆಯಿಂದ ಕರ್ತನು ಪೂರ್ಣಾವಧಿ ಸೇವಕರನ್ನು ಎಬ್ಬಿಸುವಂತೆ, ಬಗಿದೊರ ತಾಲೂಕಿನ ಒಳಗ್ರಾಮಗಳಿಗೆ ಸೇವಕರು ದೊರೆಯುವಂತೆ, ಪ್ರಾರ್ಥಿಸಿರಿ.

## 05. ರಾಜಸ್ತಾನ – ಉದಯಪುರ ಪ್ರಾಂತ್ಯ

**ಸ್ತುತಿಸಿರಿ:** ಕಳೆದ 2 ವರ್ಷಗಳ ಹಿಂದೆ ಮನೆಬಿಟ್ಟು ಹೋಗಿದ್ದ ಮನೀಷ ಎಂಬವರು ಪ್ರಾರ್ಥನೆಯ ಫಲವಾಗಿ ಸುರಕ್ಷಿತವಾಗಿ ಮನೆಗೆ ಹಿಂತಿರುಗಿ ಬಂದಿರುವರು. ಹೇಮರಾಜ್ ಹಾಗೂ ಸಂಬುಲಾಲ್ ಎಂಬವರು ರಕ್ಷಿಸಲ್ಪಟ್ಟ ನಂತರ ಸ್ವಯಂ ಪ್ರೇರಿತರಾಗಿ ಸೇವೆಯಲ್ಲಿ ಪಾಲು ತೆಗೆದುಕೊಳ್ಳುತ್ತಿರುವರು. ಮಾನಸೀಕ ಅಸ್ವಸ್ಥೆಯರಾಗಿದ್ದ ಮರಿಯಾಮ್ ಹಾಗೂ ಸಾಧನ ಎಂಬವರು ಸ್ವಸ್ಥರಾಗಿರುವರು. 31 ಜನರು ತಮ್ಮ ನೂತನ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಸಿಯಾದ್ ಕ್ಷೇತ್ರದಲ್ಲಿ ಸಭಾಕಟ್ಟಡಕ್ಕೆ ಅನುಮತಿ ದೊರೆಯುವಂತೆ, ಸೇವೆಗೆ ಒಪ್ಪಿಸಿಕೊಂಡಿರುವಂಥ 45 ಯೌವನಸ್ಥರಿಗೆ ತರಬೇತಿಯು ಪ್ರಾರಂಭವಾಗುವಂತೆ, ಕೊಟ್ರಾ ಎಂಬ ಪ್ರಾಂತ್ಯದಲ್ಲಿ ಕಾಣಿಸಿಕೊಂಡಿರುವ ಅಂಧಕಾರದ ಕ್ರಿಯೆಗಳನ್ನು ಕರ್ತನು ನಿವಾರಣೆ ಮಾಡುವಂತೆ, ವಿಶ್ವಾಸದರಿಕೆಗಾಗಿ ಪೂರ್ವಸಿದ್ಧತಾ ತರಗತಿಗಳಲ್ಲಿ ಹಾಜರಾಗುತ್ತಿರುವ 50 ಜನರಿಗಾಗಿ ಪ್ರಾರ್ಥಿಸಿರಿ.

## 06. ಉತ್ತರ ಪ್ರದೇಶ – ಲಖನೌ

**ಸ್ತುತಿಸಿರಿ:** ಮೊಹಮ್ಮದಪುರ ಪ್ರಾಂತ್ಯದಲ್ಲಿ ನಡೆಯುತ್ತಿರುವ ಸಭಾಕಟ್ಟಡದ ಕೆಲಸವು ಪೂರ್ಣಗೊಳ್ಳುವಂತೆ, ಬರುವಾಲ ಕ್ಷೇತ್ರದ ವಿಶ್ವಾಸಿಗಳು ಸಭಾಕಟ್ಟಡಕ್ಕಾಗಿ ಭೂಮಿಯನ್ನು ಸಿದ್ಧಗೊಳಿಸುತ್ತಿರುವರು. ಮನೋಜ್ ಕುಮಾರ ಎಂಬವರು ಮಾನಸಾಂತರ ಹೊಂದಿದ್ದಕ್ಕಾಗಿ ಸೇವೆಗೆ ಬಾಗಿಲು ತೆರೆದಿರುವದು. ರಾಜಂಗಡಿ ಗ್ರಾಮದ ಅನೀಲ್ ಕುಮಾರ ಎಂಬ ಹೊಸ ವಿಶ್ವಾಸಿಯು ಆರಾಧನೆಗಾಗಿ ತಮ್ಮ ಮನೆಯನ್ನು ತೆರೆದಿರುವರು. ವಿಜಿಪ್ಪುರ್ವ ಎಂಬಲ್ಲಿ 5 ಜನರು ವಾಕ್ಯದ ಮೂಲಕ ಸ್ಪರ್ಷಿಸಲ್ಪಟ್ಟಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಪೂಜಾ ಎಂಬವರ ಮನೆಯು ಸಂತಾನ ಭಾಗ್ಯವನ್ನು ಪಡೆಯುವಂತೆ, ಕಲುವಾ ಗ್ರಾಮದ ಸೇವೆಗೆ ವಿರೋಧಿಸುವವರನ್ನು ಕರ್ತನು ಸಂಧಿಸುವಂತೆ, ಲಾಲಪುರದಲ್ಲಿ ನಡೆಯಲಿರುವ ವಿಶ್ವಾಸದರಿಕೆಯ ಕೂಟದ ಪೂರ್ವಸಿದ್ಧತೆಗಾಗಿ, ಸರೈ ಗ್ರಾಮದಲ್ಲಿ ಸಭಾಕಟ್ಟಡಕ್ಕೋಸ್ಕರ ಸರಿಯಾದ ಭೂಮಿಯು ದೊರೆಯುವಂತೆ ಪ್ರಾರ್ಥಿಸಿರಿ.

## 07. ಬಿಹಾರ

**ಸ್ತುತಿಸಿರಿ:** ಜಾಮುಯಿ ಜಿಲ್ಲೆಯಲ್ಲಿರುವ 25 ಗ್ರಾಮಗಳನ್ನು ಸೇವೆಗಾಗಿ ಗುರುತಿಸಲಾಗಿದೆ. 27 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. 98 ಗ್ರಾಮಗಳಲ್ಲಿ ಕರ್ತನ ಪ್ರೀತಿಯನ್ನು ಹಂಚಿಕೊಳ್ಳಲಾಯಿತು. ರಕ್ಷಣೆ ಹೊಂದಿದ ನಂತರ 20 ಹೊಸ ವಿಶ್ವಾಸಿಗಳು ಸುವಾರ್ತಾ ವಾಕ್ಯವನ್ನು ಹಂಚಿಕೊಳ್ಳುತ್ತಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಪ್ರಥಮ ಸಲ ಸುವಾರ್ತಾ ವಾಕ್ಯವನ್ನು ಆಲಿಸಿರುವಂಥ 305 ಜನರು ರಕ್ಷಣೆ ಹೊಂದುವಂತೆ, ಸ್ವಯಂ ಸಹಾಯ ಗುಂಪುಗಳ ಮೂಲಕ ಗ್ರಾಮಗಳು ಆರ್ಥಿಕವಾಗಿ ಮೇಲೆ ಬರಲು ಮಾಡಿಕೊಳ್ಳುತ್ತಿರುವಂಥ ಯೋಜನೆಗಾಗಿ, ಪೂರ್ಣಾವಧಿ ಸೇವೆಗೆ ತಮ್ಮನ್ನು ಒಪ್ಪಿಸಿಕೊಂಡಿರುವಂಥ 20 ಯೌವನಸ್ಥರಿಗೆ ತರಬೇತಿಯು ಪ್ರಾರಂಭವಾಗುವಂತೆ, 10 ಆರಾಧನಾ ಕೇಂದ್ರಗಳಿಗೆ ಅವಶ್ಯವಾಗಿರುವ ಸಭಾ ಕಟ್ಟಡಗಳಿಗೆ ಬೂಮಿಯು ದೊರೆಯುವಂತೆ ಪ್ರಾರ್ಥಿಸಿರಿ.

## 08. ಪಶ್ಚಿಮ ಬಂಗಾಳ – ಕೊಲ್ಕೊತ್ತ ಪ್ರಾಂತ್ಯ

**ಸ್ತುತಿಸಿರಿ:** ಸರಜೀತ ಬಿಸ್ವಾಸ್ ಎಂಬ ಮಿಷಿನರಿಗೆ ಒಬ್ಬರು ಸೈಕಲ್ ಉಡುಗೊರೆ ಕೊಟ್ಟಿರುವರು. 11 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ತಾವು ಹೇಗೆ ಸ್ವಸ್ಥರಾದೆವೆಂದು ರೂತಮ್ ಮಿರ್ಧಾ ಎಂಬವರು ಸಾಕ್ಷಿ ಕೊಡುತ್ತಿರುವರು. 56 ಗ್ರಾಮಗಳಲ್ಲಿ ಜರುಗಿದ ಅನ್ವೇಷಕರ ಕೂಟಗಳ ಮೂಲಕ ಕರ್ತನು ಹೊಸ ಆತ್ಮಗಳನ್ನು ಕೊಟ್ಟಿರುವನು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** 41 ವಿಶ್ವಾಸಿಗಳು ಹಾಗೂ ಅವರ ಮನೆಯವರು ಸೇರಿ ಬರುತ್ತಿರುವ ಕೊರಬಾ ಆರಾಧನಾ ಗುಂಪಿಗೆ ಬೇಕಾಗಿರುವ ಸಭಾಕಟ್ಟಡಕ್ಕಾಗಿ, ಪ್ರಥಮ ಸಲ ಸುವಾರ್ತಾ ವಾಕ್ಯವನ್ನು ಆಲಿಸಿರುವಂಥ 337 ಜನರು ಕರ್ತನ ಪ್ರೀತಿಯಲ್ಲಿ ಅಭಿವೃದ್ಧಿ ಹೊಂದುವಂತೆ, ದಾಂಪತ್ಯದ 6 ವರ್ಷಗಳಿಂದ ಸಂತಾನಕ್ಕಾಗಿ ಎದುರುನೋಡುತ್ತಿರುವಂಥ ಗೌತಮ್ ಬಾಗ್ ಹಾಗೂ ಅಪರ್ಣಾ ಬಾಗ್ ಎಂಬ ದಂಪತಿಗಾಗಿ, ವಿಶ್ವಾಸದರಿಕೆಗಾಗಿ ಪೂರ್ವಸಿದ್ಧತಾ ತರಗತಿಗಳಲ್ಲಿ ಭಾಗವಹಿಸುತ್ತಿರುವ ಬುರದ್ವಾರ ಪ್ರಾಂತ್ಯದ 10 ಜನರಿಗಾಗಿ ಪ್ರಾರ್ಥಿಸಿರಿ.

## 09. ಸಿಕ್ಕಿಂ

**ಸ್ತುತಿಸಿರಿ:** ದಾರಾಪ ಕ್ಷೇತ್ರದಲ್ಲಿ ವಿಶ್ವಾಸಿಗಳ ಸಂಖ್ಯೆಯು 127ಕ್ಕೆ ಏರಿಕೆಯಾಗಿರುವದು. 273 ಜನರು ಪುನಃ ದೇವರ ವಾಕ್ಯವನ್ನು ಆಲಿಸುವುದಕ್ಕೆ ಆಸಕ್ತರಾಗಿರುವರು. 25 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಳ್ಳಲು ಸಿದ್ಧರಾಗುತ್ತಿರುವರು. ಮನ್‌ಮಾಯಾ ಎಂಬವರ ಮನೆಯವರು ನಲಕ್‌ತಾಂಗ್ ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ರಕ್ತ ಕ್ಯಾನ್ಸರ್‌ನಿಂದ ಬಾಧೆಪಡುತ್ತಿರುವಂಥ ಸುಮನ್ ರಸಿಲಿ ಎಂಬವರನ್ನು ಕರ್ತನು ಸ್ಪರ್ಷಿಸುವಂತೆ, ಕೈಜಾಲೆ ಕ್ಷೇತ್ರದ ವಿಶ್ವಾಸಿಗಳು ಆತ್ಮೀಕವಾಗಿ ಬೆಳೆಯುವಂತೆ, ನಂಬಿಕೆಯ ಕಾರಣ ವಿರೋಧವನ್ನು ಎದುರಿಸುತ್ತಿರುವಂಥ ಸಂತೋಷ್ ಸುಬ್ಬಾ ಎಂಬವರಿಗಾಗಿ ಪ್ರಾರ್ಥಿಸಿರಿ.

## 10. ಮಣಿಪುರ

**ಸ್ತುತಿಸಿರಿ:** ಐರಿಲ್‌ಬಾಂಗ್ ಕ್ಷೇತ್ರದಲ್ಲಿ ಉದೈಸಿಂಗ ಎಂಬವರ ಕುಟುಂಬವು ತಮ್ಮ ಮನೆಯನ್ನು ಸತ್ಯವೇದ ಅಧ್ಯಯನಕ್ಕಾಗಿ ತೆರೆದಿರುವರು. 5 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಹೊಸದಾಗಿ ಮೂರು ಜನರು ಆಂದ್ರೊ ಅವಾಂಗ್ ಗ್ರಾಮದ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಸದಸ್ಯರಾಗಿರುವರು. 56 ಗ್ರಾಮಗಳಲ್ಲಿ ಜರುಗಿದ ಅನ್ವೇಷಕರ ಕೂಟಗಳಲ್ಲಿ 151 ಜನರು ಯೇಸುವನ್ನು ಹೆಚ್ಚಾಗಿ ತಿಳಿದುಕೊಳ್ಳಲು ಆಸಕ್ತರಾಗಿರುವರು.

**ಪ್ರಾರ್ಥಿಸಿರಿ:** ಯುವ್‌ನಾವ್ ಖುನೌ ಎಂಬಲ್ಲಿ ಮುಂದುವರಿದಿರುವ ಸುವಾರ್ತಾ ಕೂಟಗಳಲ್ಲಿ ಪವಿತ್ರಾತ್ಮನು ಕಾರ್ಯಮಾಡುವಂತೆ, ತಮ್ಮ ಸ್ವಂತದವುಗಳನ್ನು ಕಳೆದುಕೊಂಡು ನಿರಾಶ್ರಿತರ ಶಿಬಿರಗಳಲ್ಲಿರುವ ಜನರಿಗೆ ಪುನರ್ವಸತಿಯು ದೊರೆಯುವಂತೆ, ಸೇವೆಗೆ ವಿರೋಧಿಸುತ್ತಿರುವ ಕಸ್ತೂರಿ ಮೇತಿ ಎಂಬವರನ್ನು ಕರ್ತನು ಸಂಧಿಸುವಂತೆ, ಯೇಸು ಕ್ರಿಸ್ತನ ನಂಬಿಕೆಯ ಕಾರಣ ವಿರೋಧವನ್ನು ಎದುರಿಸುತ್ತಿರುವ ಕೈನೂರು ಗ್ರಾಮದ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿರಿ.

## 11. ಒಡಿಷಾ – ಗಜಪತಿ, ಗಂಜಾವ್ ಜಿಲ್ಲೆಗಳು

**ಸ್ತುತಿಸಿರಿ:** ನೊಲಾಸಿಂಗ್ ಕ್ಷೇತ್ರದಲ್ಲಿ ಏರ್ಪಡಿಸಿದ್ದ ಪ್ರಥಮ ವೈದ್ಯಕೀಯ ಶಿಬಿರದಲ್ಲಿ 200 ಜನರು ಪ್ರಯೋಜನವನ್ನು ಪಡೆದರು. ಅಂಧಾರಿ ಗ್ರಾಮಕ್ಕೆ ಕರ್ತನು ನೂತನ ಸಭಾಕಟ್ಟಡವನ್ನು ಅನುಗ್ರಹಿಸಿದ್ದಾನೆ. ಲಿರಾಂಗೊ ಗ್ರಾಮದ ಸೇವೆಗೆ ವಿಶ್ವಾಸಿಗಳು ಒಂದು ದ್ವಿಚಕ್ರ ವಾಹನವನ್ನು ಕೊಟ್ಟಿರುವರು. 24 ಜನರು ತಮ್ಮ ನೂತನ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು.

**ಪ್ರಾರ್ಥಿಸಿರಿ:** ಪತ್ರಾಪುರ ತಾಲೂಕಿನಲ್ಲಿ ಸೇವೆಯನ್ನು ಪ್ರಾರಂಭಿಸಲು ಕರ್ತನು 10 ಮಿಷನರಿಗಳನ್ನು ಅನುಗ್ರಹಿಸುವಂತೆ, ಅನುಮೆಂಟ ಸಭೆಯ ವಿಶ್ವಾಸಿಗಳ ಮೂಲಕ ನೆರೆಯ ಗ್ರಾಮಗಳವರು ಆಶೀರ್ವದಿಸಲ್ಪಡುವಂತೆ, ವಿಶ್ವಾಸದರಿಕೆಗೆ ಸಿದ್ಧರಾಗುತ್ತಿರುವಂಥ 273 ಜನರಿಗಾಗಿ, ಅಂಗೆದಾ ಹಾಗೂ ಖಂದಾರಿಸಾಹಿ ಗ್ರಾಮಗಳಲ್ಲಿ ದೇವರ ವಾಕ್ಯವನ್ನು ಆಲಿಸಿದ ಜನರು ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ.

## 12. ಒಡಿಷಾ – ಸಂತಾಲಿ ಪ್ರಾಂತ್ಯ

**ಸ್ತುತಿಸಿರಿ:** 7 ಕ್ಷೇತ್ರದಲ್ಲಿ ಏರ್ಪಡಿಸಿದ್ದ ಉಪವಾಸ ಪ್ರಾರ್ಥನೆಯ ಕೂಟದ ಫಲಿತಾಂಶವಾಗಿ ಸೇವೆಯು ಅಭಿವೃದ್ಧಿಯಾಗುತ್ತಿರುವದು. ನಾಲಾಬಿಲ್ಲಾ ಕ್ಷೇತ್ರದಲ್ಲಿ ಕಾಣಿಸಕೊಂಡಿದ್ದ ಸೇವಾ ಅಡತಡೆಗಳನ್ನು ಅವಕಾಶಗಳಿಗೆ ಬದಲಾಯಿಸಿರುವನು. 21 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿ ಕೊಂಡಿರುವರು. ಹೊಸ ಸಭಾಕಟ್ಟಡವು ಪ್ರತಿಷ್ಠಿಸಿದ ನಂತರ ಬಾಭುಪಲ್ ಗ್ರಾಮದ ವಿಶ್ವಾಸಿಗಳು ಸುವಾರ್ತೆಯನ್ನು ಸಾರುವುದರಲ್ಲಿ ಆಸಕ್ತರಾಗಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಖಾದಿಬಹಾಲಿ ಕ್ಷೇತ್ರದಲ್ಲಿ ನಡೆದ ವಿಶ್ವಾಸಿಗಳ ಕೂಟಕ್ಕೆ ಸಂಬಂಧಿಸಿದ ಅನುಕರಣ ಸೇವೆಯು ನಡೆಯುವಂತೆ, ವಿಶ್ವಾಸಿಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿರುವ ಕಾರಂಜಿಯಾ ಗ್ರಾಮಕ್ಕೆ ಸಭಾ ಕಟ್ಟಡಕ್ಕೋಸ್ಕರ ಭೂಮಿಯು ದೊರೆಯುವಂತೆ, ಹೋ ಹಾಗೂ ಸಂತಾಲಿ ಪಂಗಡಗಳವರ ನಡುವೆ ಇರುವ 201 ಸತ್ಯವೇದ ಅಧ್ಯಯನ ಗುಂಪುಗಳು ಆರಾಧನಾ ಗುಂಪುಗಳಾಗಿ ಮಾರ್ಪಡುವಂತೆ, ಸೇವಾ ಯೋಜನೆಯ ಪ್ರಕಾರ ಈ ವರ್ಷ ಹೊಸದಾಗಿ 35 ಮಿಷನರಿಗಳನ್ನು ತೆಗೆದುಕೊಳ್ಳುವಂತೆ ಪ್ರಾರ್ಥಿಸಿರಿ.

## 13. ಒಡಿಷಾ – ಕಂದಮಾಲ್ ಜಿಲ್ಲೆ

**ಸ್ತುತಿಸಿರಿ:** ಕುಕುರಕುಂಪಾ, ರುಜಾಂಗಿ ಹಾಗೂ ಭಲಿಯಾಪಾಡ ಗ್ರಾಮಗಳಲ್ಲಿ ಸತ್ಯವೇದ ಅಧ್ಯಯನ ಗುಂಪುಗಳನ್ನು ರಚಿಸಲಾಗಿದೆ. ವಿಜಯ್‌ಕುಮಾರ ಸೇಠಿ ಎಂಬ ಮಿಷನರಿಯು ಸಂತಾನ ಭಾಗ್ಯವನ್ನು ಪಡೆದಿರುವರು. ದುರಾತ್ಮನ ಹಿಡಿತದಲ್ಲಿದ್ದ ಮೀನಾಕ್ಷಿ ಬೆಹರಾ ಎಂಬವರನ್ನು ಯೇಸು ಬಿಡುಗಡೆ ಮಾಡಿರುವನು. ಬಂಡುಲಿ ಕ್ಷೇತ್ರದಲ್ಲಿ ಸಭಾಕಟ್ಟಡಕ್ಕೋಸ್ಕರ ಭೂಮಿಯನ್ನು ಕೊಂಡುಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಮೂರು ಸೇವಾ ಕ್ಷೇತ್ರಗಳಿಗೆ ಬೇಕಾಗಿರುವ ಧ್ವನಿವರ್ಧಕಗಳಿಗಾಗಿ, ಹಳೆಯದಾಗಿರುವ ಸಾಲಾಗುಡ ಸಭಾಕಟ್ಟಡವು ದುರಸ್ತಿಯಾಗುವಂತೆ, ಕಂದಮಾಲ ಕ್ಷೇತ್ರದ ಕಾರ್ಯಾಲಯಕ್ಕೆ ಒಂದು ಕಂಪ್ಯೂಟರ್ ಹಾಗೂ ಮುದ್ರಣ ಯಂತ್ರವು ದೊರೆಯುವಂತೆ, ಖಜೂರಿಪಾಡ ಪ್ರಾಂತ್ಯದಲ್ಲಿ ಬಿತ್ತಲ್ಪಟ್ಟಂಥ ದೇವರ ವಾಕ್ಯವು ಜನರ ಹೃದಯಗಳಲ್ಲಿ ಕಾರ್ಯಮಾಡುವಂತೆ ಪ್ರಾರ್ಥಿಸಿರಿ.

## 14. ಒಡಿಷಾ – ರಾಯಗಡ ಪ್ರಾಂತ್ಯ

**ಸ್ತುತಿಸಿರಿ:** ಪೆದಗುಡ ಗ್ರಾಮದ ಸಭೆಯಲ್ಲಿ ಹೊಸದಾಗಿ 5 ಜನರು ಸದಸ್ಯರಾಗಿರುವರು. ನೊಮಿತೊ ಎಂಬ ಕುಟುಂಬದವರ ಮೂಲಕ ಜಂಬೊಗುಡ ಗ್ರಾಮದ ಸೇವೆಯಲ್ಲಿ ಹೊಸ ಆತ್ಮಗಳು ದೊರೆತಿರುವವು. ರಾತ್ರಿ ಕೂಟಗಳ ಕಾರಣ ಕುಪ್ರಿಗುಡದಲ್ಲಿ ವಿಶ್ವಾಸಿಗಳ ಸಂಖ್ಯೆಯು 60ಕ್ಕೆ ಏರಿಕೆಯಾಗಿರುವದು. ಕ್ರಿಸ್ತನಲ್ಲಿ ದೃಢ ವಿಶ್ವಾಸವನ್ನು ಹೊಂದಿರುವಂಥ 9 ಜನರು ಸುವಾರ್ತೆಯನ್ನು ಸಾರುತ್ತಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಚಂದ್ರಾಪುರ ಪ್ರಾಂತ್ಯದ ಸೇವೆಯಲ್ಲಿ ಆತ್ಮ ಫಲವು ಹೆಚ್ಚಾಗುವಂತೆ, ಡುಕುಮ್ ಗ್ರಾಮದ ಸೇವೆಗೆ ವಿರೋಧಿಸುತ್ತಿರುವವರನ್ನು ಕರ್ತನು ಸಂಧಿಸುವಂತೆ, ಹಲ್ಲಮ್ ಗ್ರಾಮದಲ್ಲಿ ನಿರ್ಮಿಸುತ್ತಿರುವ ಸಭಾಕಟ್ಟಡವು ಪೂರ್ಣಗೊಳ್ಳುವಂತೆ, ಸಿನಪುರ ಹಾಗೂ ಹುಂದಲಿಜುಲಿ ಎಂಬ ಗ್ರಾಮಗಳಲ್ಲಿ ದೇವರ ವಾಕ್ಯಗಳನ್ನು ಆಲಿಸಿದ ಜನರು ಕ್ರಿಸ್ತನಲ್ಲಿ ಬಲಹೊಂದುವವರಾಗುವಂತೆ ಪ್ರಾರ್ಥಿಸಿರಿ.

## 15. ಒಡಿಷಾ – ಸಂಬಲಪುರಿ ಪ್ರಾಂತ್ಯ

**ಸ್ತುತಿಸಿರಿ:** ದಾಂಪತ್ಯ ಜೀವಿತದ 10 ವರ್ಷಗಳ ನಂತರ ಹನ್ನಾನಂದ ಎಂಬವರು ಸಂತಾನ ಭಾಗ್ಯವನ್ನು ಪಡೆದಿರುವರು. ತಲಪಾಡ ಗ್ರಾಮದ ಸಭೆಗೆ ವಿಶ್ವಾಸಿಗಳು ಧ್ವನಿವರ್ಧಕ ಯಂತ್ರವನ್ನು ಉಡುಗೊರೆಯಾಗಿ ಕೊಟ್ಟಿರುವರು. ಸೇವಕರು ನಡೆಸುತ್ತಿರುವಂಥ ಉಪವಾಸ ಪ್ರಾರ್ಥನಾ ಕೂಟಗಳ ಕಾರಣ ಸೇವಾ ವಿರೋಧಗಳು ಕಡಿಮೆಯಾಗುತ್ತಿರುವವು ಹಾಗೂ ಹೊಸ ಸಂಪರ್ಕಗಳು ದೊರೆಯುತ್ತಿರುವವು. ಕಳೆದ 3 ವರ್ಷಗಳಿಂದ ದುರಾತ್ಮನ ಹಿಡಿತದಲ್ಲಿದ್ದ ಸೀಮಾರಾಣಿ ಎಂಬವರನ್ನು ಕರ್ತನು ಬಿಡುಗಡೆಮಾಡಿರುವನು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಮುಕುಂದಸಾಗರ ಎಂಬವರು ಸೇವೆ ಸಲ್ಲಿಸುತ್ತಿರುವ 5 ಗ್ರಾಮಗಳ ಬಾಗಿಲುಗಳು ಸೇವೆಗೆ ತೆರೆಯಲ್ಪಡುವಂತೆ. ಚಿಂತಿಮುಂಡ ಹಾಗೂ ಝಿಂಕೇರಮಾಲ್ ಎಂಬ ಗ್ರಾಮಗಳಲ್ಲಿ ಸಭಾಮದಿರಗಳು ಕಟ್ಟಲ್ಪಡುವಂತೆ, ಬರ್ಗಾಧ ಜಿಲ್ಲೆಯ ದೂರದ ಒಳಗ್ರಾಮಗಳ ಸೇವೆಗೆ ಬೇಕಾಗಿರುವ ಸಂಬಲಪುರಿ ಭಾಷೆಯ 20 ಸೇವಕರಿಗಾಗಿ, ಕರ್ಮೆಲಿ ಹಾಗೂ ಬಂಢಾಪಾಡ ಗ್ರಾಮಗಳಲ್ಲಿ ಮುಂದುವರಿದಿರುವ ಅನ್ವೇಷಕರ ಕೂಟಗಳಲ್ಲಿ ಹೊಸ ಜನರು ಭಾಗವಹಿಸುವವರಾಗುವಂತೆ ಪ್ರಾರ್ಥಿಸಿರಿ.

## 16. ಛತ್ತೀಸ್‌ಘರ್ – ಚಂಪಾ ಪ್ರಾಂತ್ಯ

**ಸ್ತುತಿಸಿರಿ:** ಪೆಟ್ಲಾ, ಮಾಧವರಾಣಿ ಹಾಗೂ ದುಮರ್ನಾರ ಎಂಬ ಗ್ರಾಮಗಳಲ್ಲಿ ಆರಾಧನಾ ಗುಂಪುಗಳು ರಚನೆಯಾಗಿರುವವು. ಮಿಷನರಿ ರೋಹಿತ ಕುಮಾರ ಬಘೇಲ ಎಂಬ ದಂಪತಿಯು ಸಂತಾನದಿಂದ ಆಶೀರ್ವದಿಸಲ್ಪಟ್ಟಿರುವರು. ಅನ್ವೇಷಕರ ಕೂಟದ ಮೂಲಕ 692 ಜನರು ದೇವರ ವಾಕ್ಯವನ್ನು ಆಲಿಸುವುದರಲ್ಲಿ ಆಸಕ್ತರಾಗಿರುವರು. 25 ಜನರು ತಮ್ಮ ನಂಬಿಕೆಯನ್ನು ಯೇಸು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಕಾಂಕಿ ಎಂಬಲ್ಲಿ ಸತ್ಯವೇದ ಅಧ್ಯಯನವನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ, 263 ಗ್ರಾಮಗಳಲ್ಲಿ ನಡೆಯುತ್ತಿರುವ ಸೇವೆಯನ್ನು ಸಂಯೋಜಿಸುವುದಕ್ಕೆ ಸೇವಕರಿಗೆ ಬೇಕಾಗಿರುವ 10 ದ್ವಿಚಕ್ರ ವಾಹನಗಳು ದೊರೆಯುವಂತೆ, ಮದ್ಯ ವ್ಯಸನಿಯಾಗಿರುವಂಥ ದೇವಚರಣ್ ಎಂಬವರನ್ನು ಕರ್ತನು ವಿಮೋಚಿಸುವಂತೆ, ಭಿನ್ಸೋ ಸುಹಾಗಪುರ ಹಾಗೂ ಡಂಗಬುಡ ಗ್ರಾಮಗಳಲ್ಲಿ ಸಭಾ ಕಟ್ಟಡಗಳು ಕಟ್ಟಲ್ಪಡುವಂತೆ ಪ್ರಾರ್ಥಿಸಿರಿ.

## 17. ಮಧ್ಯಪ್ರದೇಶ

**ಸ್ತುತಿಸಿರಿ:** 32 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ರೆಲ್ಲಿ ಗ್ರಾಮದ ಸೇವೆಗೆ ಹರಿನಾರಾಯಣರ ಮನೆಯವರು ಸಮಾಧಾನದ ಪಾತ್ರೆಯಾಗಿರುವರು. ಪಾರ್ಶ್ವವಾಯು ಪೀಡಿತರಾಗಿದ್ದ ಅಜಯ್ ಎಂಬವರು ಪ್ರಾರ್ಥನೆಯ ಫಲವಾಗಿ ಬಿಡುಗಡೆ ಹೊಂದಿರುವರು. ದುರಾತ್ಮನ ಹಿಡಿತದಲ್ಲಿದ್ದ ಅನಿತಾ ಎಂಬವರನ್ನು ಯೇಸು ವಿಮೋಚಿಸಿದ್ದಾನೆ, ಈಗವರು ಕರ್ತನಿಗೆ ಸಾಕ್ಷಿ ಕೊಡುತ್ತಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಕ್ಷಯರೋಗದಿಂದ ಬಾಧೆಪಡುತ್ತಿರುವಂಥ ಸೀಮಾ ಎಂಬವರಿಗಾಗಿ, ದಿಂಡೋರಿ ಹಾಗೂ ಮುಂಡ್ಲಾ ಜಿಲ್ಲೆಗಳ ಬಾಗಿಲುಗಳು ಸೇವೆಗಾಗಿ ತೆರೆಯುವಂತೆ, 313 ಸತ್ಯವೇದ ಅಧ್ಯಯನ ಗುಂಪುಗಳು ಆರಾಧನಾ ಗುಂಪುಗಳಾಗಿ ಮಾರ್ಪಡುವಂತೆ, ಅನುರಾಗ್ ಹಾಗೂ ಸಂದೀಪ್ ಎಂಬ ಹೊಸ ವಿಶ್ವಾಸಿಗಳ ಸಾಕ್ಷಿಯ ಮೂಲಕ ಅವರ ಮನೆಯವರು ರಕ್ಷಣೆಯೆಡೆಗೆ ಬರುವಂತೆ ಪ್ರಾರ್ಥಿಸಿರಿ.

## 18. ಗುಜರಾತ – ಸೂರತ್ ಜಿಲ್ಲೆ

**ಸ್ತುತಿಸಿರಿ:** ಹೊಸದಾಗಿ 5 ಗ್ರಾಮಗಳಲ್ಲಿ ಸೇವೆಯವನ್ನು ಪ್ರಾರಂಭಿಸಲಾಗಿದೆ. 12 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ಝುಕಾಲಾದಲ್ಲಿ ಮುಂದುವರಿದಿರುವಂಥ ಸಭಾಕಟ್ಟಡದ ಕೆಲಸಕ್ಕಾಗಿ ಕರ್ತನಿಗೆ ಸ್ತೋತ್ರಗಳು. ಶಾರದಾ ಬೆನ್ ಎಂಬವರ ಕುಟುಂಬದಲ್ಲಿ 5 ಜನರು ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಬಾಲ್ಡಾ ಹಾಗೂ ಪಲೋಡ್ ಎಂಬ ಗ್ರಾಮಗಳಲ್ಲಿ ದೇವರ ವಾಕ್ಯವನ್ನು ಆಲಿಸಿದವರು ನಂಬಿಕೆಗೆ ಬರುವಂತೆ, ಮಾನಸೀಕ ಅಸ್ವಸ್ಥರಾಗಿರುವಂಥ ದಿವ್ಯೇಶ್‌ಭಾಯ್ ಎಂಬವರನ್ನು ಕರ್ತನು ಗುಣಪಡಿಸುವಂತೆ, ದಾದಾವಾಡ ಗ್ರಾಮದ ಸೇವೆಗೆ ವಿರೋಧ ಮಾಡುವವರನ್ನು ಕರ್ತನು ಸಂಧಿಸುವಂತೆ, ಮೊರಿತಾ ಹಾಗೂ ಜುನಾಮಾಲ್ಡಾ ಎಂಬ ಗ್ರಾಮಗಳಲ್ಲಿ ಮುಂದುವರಿದಿರುವ ಅನ್ವೇಷಕರ ಕೂಟಗಳು ಫಲಕೊಡುವಂತೆ ಪ್ರಾರ್ಥಿಸಿರಿ.

## 19. ಮಹಾರಾಷ್ಟ್ರ

**ಸ್ತುತಿಸಿರಿ:** 35 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆ ಮಾಡಿಕೊಂಡಿರುವರು. ವಿನೋದ ಪಾಟೀಲ ಹಾಗೂ ಮಂಗಲ್‌ಭಾಯ್ ಕಲೆ ಎಂಬವರು ಹೊಸ ಒಡಂಬಡಿಕೆಯನ್ನು ಆಸಕ್ತಿಯಿಂದ ಓದುತ್ತಾ ಕ್ರಿಸ್ತನನ್ನು ಹೆಚ್ಚು ತಿಳುಕೊಳ್ಳುವದಕ್ಕಾಗಿ ಬಯಸಿರುವರು. ಸುವಾರ್ತೆಯನ್ನು ಹಂಚಿಕೊಳ್ಳುವುದರಲ್ಲಿ ಸುಕುಡಿ ವಿಶ್ವಾಸಿಗಳ ಆಸಕ್ತಿಯು ಹೆಚ್ಚಾಗುತ್ತಿರುವದು. ನಿವೃತಿ ಹಾಗೂ ಯಶ್ವಂತ ಎಂಬವರು ಹೊಸದಾಗಿ ಸತ್ಯವೇದ ಅಧ್ಯಯನ ಗುಂಪಿನ ಸದಸ್ಯರಾಗಿರುವರು.

**ಪ್ರಾರ್ಥಿಸಿರಿ:** ದುಲೇ ಹಾಗೂ ನಂದೂರಬಾರ ಜಿಲ್ಲೆಗಳಲ್ಲಿ ನಡೆಯಲಿರುವ ಸಮ್ಮೇಳನದ ಪೂರ್ವಸಿದ್ಧತಾ ಕೆಲಸಗಳಿಗಾಗಿ, ದುರಾತ್ಮನ ಹಿಡಿತದಲ್ಲಿರುವ ಡಿಯುಭಾಯ್ ಎಂಬವರು ವಿಮೋಚಿಸಲ್ಪಡುವಂತೆ, ಹಿಪ್ಪರ್ಗಾ ಗ್ರಾಮದಲ್ಲಿ ವಿಶ್ವಾಸಿಗಳ ಸಂಖ್ಯೆಯು ಹೆಚ್ಚಾಗುವಂತೆ, ವಿಶ್ವಾಸದರಿಕೆಯ ಪೂರ್ವಸಿದ್ಧತಾ ತರಗತಿಯಲ್ಲಿ ಹಾಜರಾಗುತ್ತಿರುವ 40 ಜನರು ಆತ್ಮೀಕವಾಗಿ ಬೆಳೆಯುವಂತೆ ಪ್ರಾರ್ಥಿಸಿರಿ.

## 20. ತೆಲಂಗಾಣ – ಹಣಮಕೊಂಡ ಪ್ರಾಂತ್ಯ

**ಸ್ತುತಿಸಿರಿ:** ಭೀಮಪುರ ತಾಲೂಕಿನ 4 ಗ್ರಾಮಗಳಲ್ಲಿ ಸೇವೆಗಾಗಿ ಗುರುತಿಸಲಾಗಿದೆ. 4 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಕೊಮ್ಮುಗುಡೆಮ್‌ನಲ್ಲಿ ಕಂಡುಬಂದಿದ್ದ ಸೇವಾ ವಿರೋಧಗಳು ಸ್ಥಗಿತಗೊಂಡಿರುವವು. ಕುಪ್ತಿ ಹಾಗೂ ಭಟ್ಟುಪಲ್ಲಿ ಗ್ರಾಮಗಳಲ್ಲಿ ಪ್ರಾರಂಭವಾಗಿರುವ ಸತ್ಯವೇದ ಅಧ್ಯಯನ ಗುಂಪುಗಳು ದೇವರ ವಾಕ್ಯದಲ್ಲಿ ಆಸಕ್ತಿಯನ್ನು ಹೊಂದಿರುವವು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ನಿಪ್ಪಾಣಿ ಪ್ರಾಂತ್ಯದ ಬಾಗಿಲು ಸೇವೆಗಾಗಿ ತೆರೆಯಲ್ಪಡುವಂತೆ, ಧಾಬಾ ತಾಲೂಕಿನ ಗ್ರಾಮಗಳಿಗೆ ಶುದ್ಧವಾದ ಕುಡಿಯುವ ನೀರು ಹಾಗೂ ರಸ್ತೆ ಸೌಕರ್ಯವು ದೊರೆಯುವಂತೆ, ಗೊಂಡಿ ಜನರ ಮಧ್ಯದಲ್ಲಿ ಸೇವೆಗೆ ಹೋಗಿ ಬರಲು ಸೇವಕರಿಗೆ ದ್ವಿಚಕ್ರ ವಾಹನವು ದೊರೆಯುವಂತೆ, ತಾಡಿಹತ್ನೂರು ಹಾಗೂ ಗುಟ್ಟಗುಡೆಮ್ ಗ್ರಾಮಗಳಲ್ಲಿ ಸಭಾಕಟ್ಟಡಕಕ್ಕೆ ಭೂಮಿಯು ದೊರೆಯುವಂತೆ ಪ್ರಾರ್ಥಿಸಿರಿ.

## 21. ತೆಲಂಗಾಣ – ಹೈದರಾಬಾದ ಪ್ರಾಂತ್ಯ

**ಸ್ತುತಿಸಿರಿ:** ಮೊಳಕಾಮಿಡಿ ಗ್ರಾಮದಲ್ಲಿ ಸತ್ಯವೇದ ಅಧ್ಯಯನ ಗುಂಪು ರಚನೆಯಾಗಿರುವದು. 3 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಅಚ್ಚಂಪೇಟ ಮಂಡಲದಲ್ಲಿ 5 ಗ್ರಾಮಗಳನ್ನು ಸೇವೆಗಾಗಿ ಗುರುತಿಸಲಾಗಿದೆ. ಯೋಹಾಮ್ ಎಂಬ ಯೌವನಸ್ಥನು ಪೂರ್ಣಾವಧಿ ಸೇವೆಗೆ ಸ್ವಯಂ ಒಪ್ಪಿಸಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** 40 ಜನರು ಕೂಡಿ ಆರಾಧಿಸುತ್ತಿರುವಂಥ ಕುಡಿಚಿಂತಬಾವಿ ಆರಾಧನಾ ಗುಂಪಿಗೆ ಸಭಾಕಟ್ಟಡಕ್ಕೋಸ್ಕರ ಬೇಕಾಗಿರುವ ಭೂಮಿಗಾಗಿ, ಮದ್ಯ ನಿರತರೂ ಹಾಗೂ ಮಾಟಮಂತ್ರಗಳಲ್ಲಿ ನಿರತರೂ ಆಗಿರುವ ನಾರಾಯಣಪುರಮ್ ಗ್ರಾಮದ ಜನರು ಬಿಡುಗಡೆ ಹೊಂದುವಂತೆ, ಚೆಂಚು ಪಂಗದವರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿರುವಂಥ ಸೇವಕರಿಗೆ ಬೇಕಾಗಿರುವ 5 ಡೋಲಕ್‌ಗಳಿಗಾಗಿಯೂ ಮತ್ತು 5 ಮೆಗಾಫೋನ್‌ಗಳಿಗಾಗಿಯೂ, ಯಾದಾದ್ರಿ ಹಾಗೂ ನಗರ ಕರ್ನೂಲು ಜಿಲ್ಲೆಗಳಿಂದ ಪೂರ್ಣಾವಧಿ ಮಿಷಿನರಿಗಳು ದೊರೆಯುವಂತೆ ಪ್ರಾರ್ಥಿಸಿರಿ.

## 22. ಆಂಧ್ರ ಪ್ರದೇಶ – ವಿಜಯವಾಡ ಪ್ರಾಂತ್ಯ

**ಸ್ತುತಿಸಿರಿ:** ಸುವಾರ್ತಾ ವಾಕ್ಯವನ್ನು ಆಲಿಸಿದ ಮೇಲೆ ಮಲ್ಲಯ್ಯ ಹಾಗೂ ವೆಂಕಟೇಶ್ ಎಂಬವರು ಮದ್ಯ ಸೇವನೆ ಮಾಡುವದಿಲ್ಲವೆಂದು ನಿರ್ಧರಿಸಿರುವರು. ಕ್ಷಯ ರೋಗದಿಂದ ಬಾಧೆಪಡುತ್ತಿದ್ದ ಅಂಕಾಲೆಮ್ಮ ಎಂಬವರನ್ನು ಯೇಸು ವಾಸಿಮಾಡಿರುವನು. ಚೆಂಚು ಪಂಗಡದ 5 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಪೋತಯ್ಯ ಎಂಬವರು ಸ್ವಸ್ಥರಾಗಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಬೋದೆನಾಯಕ ತಾಂಡಾದಲ್ಲಿ ಮುಂದುವರಿದಿರುವ ಅನ್ವೇಷಕರ ಕೂಟದಲ್ಲಿ ಜನರು ಸ್ವಸ್ಥರಾಗುವಂತೆ, ಪಾರ್ಶ್ವವಾಯು ಪೀಡಿತರಾಗಿರುವ ಪೋತಣ್ಣ ಎಂಬವರು ಸ್ವಸ್ಥರಾಗುವಂತೆ, ಯರ್ರಗುಂಟ ಗ್ರಾಮದ ವಿಶ್ವಾಸಿಗಳು ಆತ್ಮೀಕವಾಗಿ ಬೆಳೆಯುವಂತೆ, ವಿಶ್ವಾಸಿಗಳ ಸಂಖ್ಯೆಯು ಹೆಚ್ಚಾಗುತ್ತಿರುವ 4 ಆರಾಧನಾ ಗುಂಪುಗಳಿಗೆ ಬೇಕಾಗಿರುವ ಧ್ವನಿವರ್ಧಕಗಳು ದೊರೆಯುವಂತೆ ಪ್ರಾರ್ಥಿಸಿರಿ.

## 23. ಕರ್ನಾಟಕ

**ಸ್ತುತಿಸಿರಿ:** ಚಳ್ಳಕೆರೆ ಕ್ಷೇತ್ರದಲ್ಲಿ ತರಬೇತಿ ಕೇಂದ್ರದ ನಿರ್ಮಾಣಕ್ಕಾಗಿ ಅನುಮತಿ ದೊರಕಿರುವದು. ಕಳೆದ 2 ವರ್ಷಗಳಿಂದ ಮಾದಕ ವ್ಯಸನಿಯಾಗಿದ್ದ ನಾಗರಾಜ ಎಂಬವರನ್ನು ಯೇಸು ಬಿಡುಗಡೆ ಮಾಡಿರುವನು. ರಾಜೇಶ್ವರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರಾಧನಾ ಗುಂಪಿನಲ್ಲಿ ಓಂಕಾರಪ್ಪನ ಕುಟುಂಬದವರು ಹೊಸದಾಗಿ ಸದಸ್ಯರಾಗಿರುವರು. ಮೊಗಲಹಳ್ಳಿ ಮತ್ತು ತ್ಯಾವಣಗಿ ಎಂಬ ಗ್ರಾಮಗಳಲ್ಲಿ ವಿಶ್ವಾಸಿಗಳ ಸಂಖ್ಯೆಯು ಏರಿಕೆಯಾಗಿರುವದು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಹಸುಗೂಸನ್ನು ಕಳೆದುಕೊಂಡಿರುವ ಸುಜಾತಾರನ್ನು ಕರ್ತನು ಸಂತೈಸುವಂತೆ, ಸಿದ್ದಾಪುರ ಹಾಗೂ ಉಜ್ಜೀವನಪುರ ಗ್ರಾಮಗಳ ವಿಶ್ವಾಸಿಗಳು ಆತ್ಮೀಕವಾಗಿ ಬೆಳೆಯುವಂತೆ, ಜೋಗಿಹಟ್ಟಿಯಲ್ಲಿ ಸಭಾಕಟ್ಟಡಕ್ಕೋಸ್ಕರ ಭೂಮಿಯು ದೊರೆಯುವಂತೆ, ಕರ್ನಾಟಕದ 182 ಸತ್ಯವೇದ ಅಧ್ಯಯನ ಗುಂಪುಗಳು ಆರಾಧನಾ ಗುಂಪುಗಳಾಗಿ ಮಾರ್ಪಡುವಂತೆ ಪ್ರಾರ್ಥಿಸಿರಿ.

## 24. ಝಾರಖಂಡ

**ಸ್ತುತಿಸಿರಿ:** ಹಾರೂಪ್ ಕ್ಷೇತ್ರದ ಸೇವೆಗೆ ವಿರೋಧಿಸುತ್ತಿದ್ದ ಜೀತರಾಮ್ ಎಂಬವರು ಮಾನಸಾಂತರ ಹೊಂದಿದವರಾಗಿ ನೂತನ ಸೃಷ್ಟಿಯಾಗಿರುವರು. ಈಗವರು ಉತ್ಸಾಹದಿಂದ ಕೂಡಿದವರಾಗಿ ಆರಾಧನಾ ಕೂಟಗಳಲ್ಲಿ ಭಾಗವಹಿಸುತ್ತಿರುವರು. ಕೆನಬಿತ ಗ್ರಾಮದ ವಿಶ್ವಾಸಿಗಳಿಗೆ ವಿರುದ್ಧವಾಗಿದ್ದ ಅನೀಲ್ ಒರಾವೋನ್ ಎಂಬವರು ಸುವಾರ್ತೆಯಿಂದ ಸ್ಪರ್ಶಿಸಲ್ಪಟ್ಟವರಾಗಿ ಸತ್ಯವೇದ ಅಧ್ಯಯನದಲ್ಲಿ ಭಾಗವಹಿಸುತ್ತಿರುವರು. 63 ಜನರು ಯೇಸುವೇ ಕರ್ತನೆಂದು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ಕಲೇತ ಗ್ರಾಮದಲ್ಲಿ ಸತ್ಯವೇದ ಅಧ್ಯಯನ ಗುಂಪನ್ನು ರಚಿಸಲಾಗಿದೆ. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಮೆದುಳಿನ ಸೋಂಕಿನ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಂಥ ದುಲಾರ ಕೆರಕೆಟ್ಟ ಮಿಷಿನರಿಯನ್ನು ಕರ್ತನು ಸ್ಪರ್ಶಿಸುವಂತೆ, ಮಂಗ್ರ ಗ್ರಾಮದ ಸೇವೆಗೆ ವಿರೋಧಿಸುವವರನ್ನು ಕರ್ತನು ಸಂಧಿಸುವಂತೆ, ಭರನೋ ಕ್ಷೇತ್ರದಲ್ಲಿ ಕುರುಖ್–ಮುಂಡಾರಿ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಭಾಗವಹಿಸುವವರು ಆತ್ಮಗಳ ಸುಗ್ಗಿಯಲ್ಲಿ ಪಾಲು ಹೊಂದುವವರಾಗುವಂತೆ, ಕಾನೂನು ಬಾಹಿರವಾಗಿ ಸಾರಾಯಿ ತಯಾರಿಸಿ, ಜೀವನ ನಿರ್ವಹಣೆ ಮಾಡುತ್ತಿರುವಂಥ ಸುಲೋಚನಾ ಎಂಬವರು ಮಾನಸಾಂತರ ಹೊಂದುವಂತೆ ಪ್ರಾರ್ಥಿಸಿರಿ.

## 25. ಅಸ್ಸಾಂ

**ಸ್ತುತಿಸಿರಿ:** ಲೊಪೆಂಗತೊಲ ಗ್ರಾಮದ ವಿಶ್ವಾಸಿಗಳು ಸ್ವತಃ ತಮಗೋಸ್ಕರ ಆರಾಧನಾ ಕೇಂದ್ರವನ್ನು ನಿರ್ಮಿಸಿಕೊಳ್ಳುತ್ತಿರುವರು. ಬೊಡೋ ಹಾಗೂ ರಾಜವಂಶಿ ಪಂಗಡಗಳ ಜನರು ವಾಸವಾಗಿರುವ ಮೊಯಿನಾ ಗುರಿ ಪ್ರಾಂತ್ಯದ ಬಾಗಿಲು ಸೇವೆಗೆ ತೆರೆದಿರುವದು. ದುರಾತ್ಮನ ಹಿಡಿತದಲ್ಲಿದ್ದ ಬಕ್ರಿಂಗೆಂಗಟಿ ಗ್ರಾಮದ ಮೇಕ್ರಿ ಎಂಬವರನ್ನು ಕರ್ತನು ವಿಮೋಚಿಸಿರುವನು. ಹತಿಬುದ ಎಂಬ ಗ್ರಾಮದಲ್ಲಿ 17 ಜನರು ಪ್ರಥಮ ಸಲ ದೇವರ ವಾಕ್ಯವನ್ನು ಆಲಿಸಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ವಿಶ್ವಾಸದರಿಕೆಗೋಸ್ಕರ ಪೂರ್ವಸಿದ್ಧತಾ ತರಗತಿಗಳಲ್ಲಿ ಹಾಜರಾಗುತ್ತಿರುವಂಥ 18 ಜನರಿಗಾಗಿ, ವಿಶ್ವಾಸ ಜೀವಿತದಿಂದ ಹಿಂಜಾರಿ ಹೋಗಿರುವಂಥ ಕುಸುಮ ಹಾಗೂ ಅಪುವೇಲ ಎಂಬ ಯುವಕರಿಗಾಗಿ, ದೇವರ ಮಕ್ಕಳ ಹೃದಯಗಳನ್ನು ಬೇರೆಡೆ ತಿರುಗಿಸುತ್ತಿರುವ ಲೋಖಿರಾಮ್ ಎಂಬವರನ್ನು ಕರ್ತನು ಸಂಧಿಸುವಂತೆ, ಮಾದಕ ವ್ಯಸನಿಗಳಾದ ದರುದುರಿ ಗ್ರಾಮದ ಜನರನ್ನು ಪರಿವರ್ತಿಸುವ ಪ್ರಯತ್ನವು ಸಫಲವಾಗುವಂತೆ ಪ್ರಾರ್ಥಿಸಿರಿ.

## 26. ತ್ರಿಪುರ

**ಸ್ತುತಿಸಿರಿ:** 17 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ಸಬಿರುಂಗರ ಮನೆಯವರು ಹೊಸದಾಗಿ ಹಾರುಗಪರ ಆರಾಧನಾ ಗುಂಪಿನ ಸದಸ್ಯರಾಗಿರುವರು. ದುರಾತ್ಮನ ಹಿಡಿತದಲ್ಲಿದ್ದ ಮಮತಾ ದೆಬ್ಬರ್ಮಾ ಎಂಬವರನ್ನು ಯೇಸು ವಿಮೋಚಿಸಿರುವನು. ಬಿಪುಸ್ ದೆಬ್ಬರ್ಮಾ ಎಂಬವರು ಸ್ವಯಂ ಪ್ರೇರಿತರಾಗಿ ಸಂಪರಾಯಿ ಕಾಮಿ ಕ್ಷೇತ್ರದ ಸೇವೆಯಲ್ಲಿ ತೊಡಗಿಸಿಕೊಂಡಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ರಾಮಕೃಷ್ಣ ಕಾಮಿಯಲ್ಲಿ ಮುಂದುವರಿದಿರುವಂಥ ಅನ್ವೇಷಕರ ಕೂಟಗಳು ಫಲಕೊಡುವಂತೆ, ಹಿರಣ್ ಎಂಬವರ ಸಾಕ್ಷಿಯ ಮೂಲಕ ಅವರ ಮನೆಯವರು ರಕ್ಷಣೆಯೆಡೆಗೆ ಬರುವಂತೆ, ವಿಶ್ವಾಸದೀಕ್ಷೆಗೆ ಸಿದ್ಧರಾಗುತ್ತಿರುವಂಥ 67 ಜನರು ನಂಬಿಕೆಯಲ್ಲಿ ದೃಢವಾಗಿರುವಂತೆ, ರೂತಯ್‌ಕಾಮಿ ಹಾಗೂ ಸೆರ್ತುಂಗ್‌ಕಾಮಿ ಗ್ರಾಮಗಳ ಆರಾಧಾನಾ ಗುಂಪುಗಳಲ್ಲಿರುವ ವಿಶ್ವಾಸಿಗಳು ಆತ್ಮೀಕವಾಗಿ ಬೆಳೆಯುವಂತೆ ಪ್ರಾರ್ಥಿಸಿರಿ.

## 27. ಆಂಧ್ರ ಪ್ರದೇಶ – ಜಾತಾಪು

**ಸ್ತುತಿಸಿರಿ:** ಜಾತಾಪು ಸಮ್ಮೇಳನದಲ್ಲಿ 37 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡರು. 8 ಗ್ರಾಮಗಳಲ್ಲಿ ಕರ್ತನು ನಮಗೆ ಆರಾಧನಾ ಗುಂಪುಗಳನ್ನು ಅನುಗ್ರಹಿಸಿರುವನು. ಹೊಸದಾಗಿ 7 ಜನರು ದೆಪಕರ್ಜಾ ಗ್ರಾಮದ ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. ತೊಟ್ಟಾಡಿ ಕ್ಷೇತ್ರದಲ್ಲಿ ಕರ್ತನು ಅನುಗ್ರಹಿಸಿರುವ ಸಭಾಕಟ್ಟಡವೀಗ ತೊಟ್ಟಾಡಿ ಕ್ಷೇತ್ರದ ಜನರಿಗೆ ಸಮುದಾಯ ಭವನವಾಗಿಯೂ ಪ್ರಯೋಜನವಾಗುತ್ತಿರುವದು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ತುಂಬಕೊಂಡ ಹಾಗೂ ಪಾಲೇಮ್ ಪ್ರಾಂತ್ಯಗಳ ಬಾಗಿಲುಗಳು ಸೇವೆಗೆ ತೆರೆಯುವಂತೆ, ರಾಷ್ಟ್ರಕುಟುಂಬಾಯ್ ಎಂಬಲ್ಲಿ ಸೇವಾ ಸಂಯೋಜನ ಕೇಂದ್ರವನ್ನು ಸ್ಥಾಪಿಸುವಂತೆ, 4 ಗ್ರಾಮಗಳಲ್ಲಿ ನಡೆದ ಸುವಾರ್ತಾ ಸಮ್ಮೇಳನಕ್ಕೆ ಸಂಬಂಧಿಸಿ ಅನುಕರಣ ಸೇವೆಯು ನಡೆಯುವಂತೆ, ಮಾನ್ಯಮ್ ಜಿಲ್ಲೆಯ ಒಳ ಗ್ರಾಮಗಳಿಗೆ ಬೇಕಾಗಿರುವ 34 ಮಿಷಿನರಿಗಳು ದೊರೆಯುವಂತೆ ಪ್ರಾರ್ಥಿಸಿರಿ.

## 28. ದೆಹಲಿ

**ಸ್ತುತಿಸಿರಿ:** ಶಾಲೆಗೆ ಹೋಗುವ 72 ಮಕ್ಕಳಿಗೆ ಶಾಲಾ ಚೀಲಗಳನ್ನು ಹಾಗೂ ಪುಸ್ತಕಗಳನ್ನು ವಿತರಿಸಲು ಕರ್ತನು ಸಹಾಯ ಮಾಡಿದನು. 17 ಜನರು ತಮ್ಮ ನಂಬಿಕೆಯನ್ನು ಅರಿಕೆಮಾಡಿಕೊಂಡಿರುವರು. ರೀನಾ ಎಂಬವರು ಯೇಸುವನ್ನು ಅಂಗೀಕರಿಸಿಕೊಂಡಿರುವದರಿಂದ ಕುಟುಂಬವು ಸಮಾಧಾನವಾಗಿರುವದು. ಸುನೀಲ್ ಮತ್ತು ಆಶಾ ಎಂಬವರಿಗೆ ಕರ್ತನು ಉತ್ತಮ ಆರೋಗ್ಯವನ್ನು ದಯಪಾಲಿಸಿರುವನು.

**ಪ್ರಾರ್ಥಿಸಿರಿ:** ಆರಾದನಾ ಕೂಟಗಳಲ್ಲಿ ಹಾಜರಾಗುತ್ತಿರುವ ವಿಶ್ವಾಸಿಗಳ ಸಾಕ್ಷಿಗಳು ಅನೇಕರನ್ನು ನೀತಿಯೆಡೆಗೆ ಕರೆತರುವಂತೆ, ದುರಾತ್ಮನ ಹಿಡಿತದಲ್ಲಿ ಸಿಕ್ಕಿಕೊಂಡಿರುವಂಥ ಸರಿತಾ ಎಂಬವರನ್ನು ಯೇಸು ಸಂಪೂರ್ಣವಾಗಿ ವಿಮೋಚಿಸುವಂತೆ, 11 ಗ್ರಾಮಗಳಲ್ಲಿ ಮುಂದುವರಿದಿರುವಂಥ ಅನ್ವೇಷಕರ ಕೂಟಗಳಲ್ಲಿ ಹೊಸಬರು ಹಾಜರಾಗುವಂತೆ, ಸತ್ಯವೇದ ಅಧ್ಯಯನದಲ್ಲಿ ಹಾಜರಾಗುತ್ತಿರುವ 106 ಜನರು ದೇವರ ವಾಕ್ಯದಲ್ಲಿ ಬಲಹೊಂದುವವರಾಗುವಂತೆ ಪ್ರಾರ್ಥಿಸಿರಿ.

## 29. ಜಮ್ಮು ಕಾಶ್ಮೀರ

**ಸ್ತುತಿಸಿರಿ:** ಬುದ್ವಾನಿ ಕ್ಷೇತ್ರದ 4 ಮನೆಗಳವರಿಗೆ ತಮ್ಮ ಪಾಪಗಳು ಪರಿಹಾರವಾಗಿರುವವೆಂದು ಖಚಿತವಾಗಿರುವದು. ವಿಜಯಪುರದಲ್ಲಿ ಏರ್ಪಡಿಸಿದ್ದ 2 ದಿವಸಗಳ ಕೂಟಗಳು 180 ಜನರಿಗೆ ಪ್ರಯೋಜನಕರವಾಗಿದ್ದವು. ಗಂಗಾರಿಯಲ್ಲಿ ನಡೆಯುತ್ತಿರುವ ಸೇವೆಯಲ್ಲಿ 5 ಜನರು ರಕ್ಷಣೆ ಹೊಂದಿರುವರು. ಈ ಹಿಂದೆ ಸೇವೆಗೆ ವಿರೋಧಿಸುತ್ತಿದ್ದಂಥ ರವಿಶಂಕರ್ ಎಂಬವರು ಮಾನಸಾಂತರ ಹೊಂದಿದವರಾಗಿ ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ದಲ್ಸರ್ ಕ್ಷೇತ್ರದಲ್ಲಿ ವಾಕ್ಯ ಕೇಳಿಸಿಕೊಂಡವರು ನಂಬಿಕೆಗೆ ಬರುವಂತೆ, ಸಭಾ ಕಟ್ಟಡದ ಪ್ರತಿಷ್ಠಾ ಕೂಟಕ್ಕೆ ಸಿದ್ಧರಾಗುತ್ತಿರುವಂಥ ಧನೋಡಿ ಕ್ಷೇತ್ರದ ವಿಶ್ವಾಸಿಗಳಿಗಾಗಿ, ಸಿಧ್ರಾ ಹಾಗೂ ಲಡ್ಡಾ ಎಂಬ ಗ್ರಾಮಗಳಲ್ಲಿ ಸಭಾ ಕಟ್ಟಡಗಳಿಗಾಗಿ ಭೂಮಿಯು ದೊರೆಯುವಂತೆ, ಪೂರ್ಣಾವಧಿ ಸೇವೆಗಾಗಿ ಮುಂದೆ ಬಂದಿರುವ 10 ಯೌವನಸ್ಥರು ಬಲವಾದ ನಿರ್ಧಾರವನ್ನು ಹೊಂದುವವರಾಗುವಂತೆ ಪ್ರಾರ್ಥಿಸಿರಿ.

## 30. ಹಿಮಾಚಲ ಪ್ರದೇಶ

**ಸ್ತುತಿಸಿರಿ:** 9 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. 3 ಮನೆಗಳವರು ಹೊಸದಾಗಿ ಬಾರೊಟ ಕ್ಷೇತ್ರದ ವಿಶ್ವಾಸಿಗಳ ಅನ್ಯೋನ್ಯತೆಯ ಸದಸ್ಯರಾಗಿರುವರು. 10 ಗ್ರಾಮಗಳನ್ನು ಹೊಸದಾಗಿ ಸೇವೆಗೋಸ್ಕರ ಗುರುತಿಸಲಾಗಿದೆ. ಅಂಕಿತ ಕುಮಾರ ಮಿಷನರಿ ದಂಪತಿಯು ಸಂತಾನ ಭಾಗ್ಯವನ್ನು ಪಡೆದಿರುವರು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಅನ್ವೇಷಕರ ಕೂಟದ ಮೂಲಕ ದೇವರ ವಾಕ್ಯವನ್ನು ಆಲಿಸಿರುವ 180 ಜನರು ರಕ್ಷಣೆ ಹೊಂದುವವರಾಗುವಂತೆ, ಧುಲೇ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವ ಸೇವಾ ವಿರೋಧಗಳೆಲ್ಲವೂ ನಿವಾರಣೆಯಾಗುವಂತೆ, ಬಂಗ್ರಾನ್ ಕ್ಷೇತ್ರದಲ್ಲಿ ನಿರ್ಮಿಸುತ್ತಿರುವ ಸಭಾಕಟ್ಟಡವು ಪೂರ್ಣಗೊಳ್ಳುವಂತೆ, ಸುವಾರ್ತೆ ಸಾರಲ್ಪಡುತ್ತಿರುವಂಥ ಎಲ್ಲಾ 223 ಗ್ರಾಮಗಳಲ್ಲಿಯೂ ಸಭೆಯು ರಚನೆಯಾಗುವಂತೆ ಪ್ರಾರ್ಥಿಸಿರಿ.

## 31. ಆಂಧ್ರ ಪ್ರದೇಶ – ಸೋರ ಪ್ರಾಂತ್ಯ

**ಸ್ತುತಿಸಿರಿ:** 31 ಜನರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆಮಾಡಿಕೊಂಡಿರುವರು. ಶ್ರೀಕಾಕುಲಮ್ ಜಿಲ್ಲೆಯಲ್ಲಿ ಸತ್ಯವೇದ ಅಧ್ಯಯನ ಗುಂಪುಗಳು ರಚನೆಯಾಗಿರುವರು. ಹೊಸ ಸಭಾಕಟ್ಟಡಗಳನ್ನು ಪಡೆದವರಾದ ಶ್ರೀರಾಮಪುರ, ಸೂರ್ಯನಗರಮ್ ಹಾಗೂ ನಾಗಮ್ಮಗುಡ ಕ್ಷೇತ್ರಗಳ ವಿಶ್ವಾಸಿಗಳು ಸುವಾರ್ತೆಯನ್ನು ಸಾರುವದರಲ್ಲಿ ಆಸಕ್ತರಾಗಿರುವರು ಭರಣಿಕೋಟ ಹಾಗೂ ತೊಸುರಾಡ ಕ್ಷೇತ್ರಗಳಲ್ಲಿ ವಿಶ್ವಾಸಿಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿರುವದು. ಕರ್ತನಿಗೆ ಸ್ತೋತ್ರಗಳು.

**ಪ್ರಾರ್ಥಿಸಿರಿ:** ಗಾಂಡ್ರುಗಾಮ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಿರ್ಮಿಸುವ ಪ್ರಯತ್ನವು ಫಲಿಸುವಂತೆ, ಕೊಂಡಲೇವಿಡಿ ಗ್ರಾಮದಲ್ಲಿ ಸೇವಾ ಸಂಯೋಜನೆಯ ಕೇಂದ್ರವನ್ನು ಸ್ಥಾಪಿಸಲು ಸಾಧ್ಯವಾಗುವಂತೆ, ಯೌವನಸ್ಥರ ಕೂಟದ ಪರಿಣಾಮವಾಗಿ 3 ಗ್ರಾಮಗಳಿಂದ ಪೂರ್ಣಾವಧಿ ಸೇವೆಗೆ ಮಿಷನರಿಗಳು ದೊರೆಯುವಂತೆ, 19 ಗ್ರಾಮಗಳಲ್ಲಿ ಕಟ್ಟಲ್ಪಡುತ್ತಿರುವ ಸಭಾಕಟ್ಟಡಗಳು ಸಕಾಲದಲ್ಲಿ ಪೂರ್ಣಗೊಳ್ಳುವಂತೆ ಪ್ರಾರ್ಥಿಸಿರಿ.

## ನಂಬಿಕೆಯ ಹೆಜ್ಜೆಗಳು



19 ವರ್ಷ ಪ್ರಾಯದವಳಾದ ನಾನು ತಾರುಣ್ಯದ ಕೊನೆಯ ಹಂತಕ್ಕೆ ಬಂದಿದ್ದೇನೆ. ನನ್ನ ತಾರುಣ್ಯದ ಹಾಗೂ ಉನ್ನತ ವ್ಯಾಸಂಗದ ವಿಷಯದಲ್ಲಿ ಆಲೋಚನೆ ಮಾಡುತ್ತಾ ಕನಸುಗಳಿಂದ ಸುತ್ತುವರಿದವಳಾಗಿದ್ದೆನು. ಆದರೆ ನಾನು ಪಾರ್ಶ್ವವಾಯು ಪೀಡಿತಳಾದ ಕಾರಣ ಒಂದೇ ದಿನದಲ್ಲಿ ನನ್ನೆಲ್ಲಾ ಆಲೋಚನೆಗಳೂ ಕನಸುಗಳೂ ನುಚ್ಚುನೂರಾಗಿ ಹೋದವು. ಹಣಕಾಸಿನ ಕೊರತೆಯ ಮಧ್ಯದಲ್ಲಿಯೂ ನನ್ನ ತಂದೆಯವರು ನನ್ನ ಚಿಕಿತ್ಸೆಗಾಗಿ 70,000 ರೂಪಾಯಿಗಳನ್ನು ವೆಚ್ಚಮಾಡಿದರೂ ಪ್ರಯೋಜನವಾಗಲಿಲ್ಲ. ಮಾನವರಿಂದ ಅಸಾಧ್ಯವಾದ ಸಂಗತಿಗಳು ಯೇಸುವಿನಿಂದ ಸಾಧ್ಯವಾಗುವವು ಎಂಬ ಸಂದೇಶವನ್ನು ಹಂಚಿಕೊಳ್ಳುವುದಕ್ಕಾಗಿ ದೇವರು ನಮ್ಮ ದೂರದ ಒಬ್ಬ ಸಂಬಂಧಿಕರನ್ನು ನಮ್ಮ ಮನೆಗೆ ಕಳುಹಿಸಿಕೊಟ್ಟನು. ಅವರು ನಮ್ಮನ್ನು ಗುಜರಾತಿನ ಪಿಪ್ಲವಾನ ಕ್ಷೇತ್ರದ ಮಿಷನರಿಯ ಹತ್ತಿರ ಕರೆದುಕೊಂಡು ಹೋಗಿ ಯೇಸುವಿನ ನಾಮದಲ್ಲಿ ಉಂಟಾಗುವಂಥ ಅದ್ಭುತ ಕೃತ್ಯಗಳ ಬಗ್ಗೆ ಕೇಳಿಸಿಕೊಳ್ಳುವಂತೆ ಮಾಡಿದರು. ಅವರು ನನಗೋಸ್ಕರ ಸತತವಾಗಿ ಪ್ರಾರ್ಥನೆ ಮಾಡಿದರು. ಅದರ ಪರಿಣಾಮವಾಗಿ ಈ ದಿನಗಳಲ್ಲಿ ನನಗೆ ನಿಂತುಕೊಳ್ಳಲು ಹಾಗೂ ನಡೆದಾಡಲು ಸಾಧ್ಯವಾಗಿರುವದು. ಅದು ನನ್ನನ್ನು ಸ್ಪರ್ಷಿಸಿದ ಯೇಸು ಕ್ರಿಸ್ತನಿಂದ ಸಾಧ್ಯವಾಗಿರುವದು. ನಾನು, ಹಣದಿಂದಲ್ಲ ಬದಲಾಗಿ ಯೇಸುವಿನ ವಾಕ್ಯದಲ್ಲಿ ನಂಬಿಕೆಯಿಟ್ಟ ಕಾರಣ ಸ್ವಸ್ಥಳಾಗಿದ್ದೇನೆ ಹಾಗೂ ಈಗ ಯಾವ ತೊಂದರೆಯೂ ಇಲ್ಲ ಎಂಬದಾಗಿ ನನ್ನ ತಂದೆಯವರಿಗೂ ಮನವರಿಕೆಯಾಗಿರುವದು. ನಮ್ಮ ತಂದೆಯು ಸಹ ಯೇಸುವಿಗಾಗಿ ತಮ್ಮ ಹೃದಯವನ್ನು ತೆರೆದಿರುವರು. ನಮ್ಮ ಮನೆಯೀಗ ಸುವಾರ್ತಾ ಕೇಂದ್ರವಾಗಿರುವದು. ದೇವರು ನಮ್ಮ ನಂಬಿಕೆಯ ಹೆಜ್ಜೆಗಳನ್ನು ಬಲಪಡಿಸುವಂತೆ ಹಾಗೂ ನಮ್ಮ ಯುವ ಸಭೆಯಲ್ಲಿ ವಿಶ್ವಾಸಿಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಪ್ರಾರ್ಥಿಸಿರಿ. **ಹಿರಾಳ್‌ಬೆನ್ ವಸಾವ**

# ಪ್ರಸ್ತುತ ಸುದ್ದಿ

- ಭಾರತದ ವಾರ್ಷಿಕ ಕ್ಷಯರೋಗದ ವರದಿಯ ಪ್ರಕಾರ, 2015 ರಿಂದ 2022 ರವರೆಗೆ ಭಾರತದಲ್ಲಿ ಕ್ಷಯರೋಗಿಗಳ ಸಂಖ್ಯೆಯಲ್ಲಿ ಶೇ. 16 ರಷ್ಟು ಇಳಿತರವಾಗಿರುವದು. ವಿಶ್ವದ ಇಳಿತರವು ಶೇ. 8ರಷ್ಟಿರುವದು. 2024 ರಲ್ಲಿ ಘೋಷಿಸಿರುವ ಪ್ರಕಾರ ಕಳೆದ ವರ್ಷದಲ್ಲಿ ಭಾರತವು 25.55 ಲಕ್ಷ ಕ್ಷಯರೋಗಿಗಳನ್ನು ಹೊಂದಿರುವದು. ಇದರಲ್ಲಿ ಉತ್ತರ ಪ್ರದೇಶದಲ್ಲಿ ಹೆಚ್ಚು ರೋಗಿಗಳಿದ್ದರೆ ಬಿಹಾರ ನಂತರದಾಗಿರುವದು.

- ಜಾಗತಿಕ ಸಂತೋಷದ 2024ರ ವರದಿಯ ಪ್ರಕಾರ 143 ದೇಶಗಳಲ್ಲಿ ಭಾರತವು 126ನೇ ಶ್ರೇಣಿಯಲ್ಲಿರುವದು. ಇದರ ಹಿಂದೆ ಪಾಕಿಸ್ತಾನ, ಲಿಬಿಯಾ, ಇರಾಕ್, ಪಾಲೆಸ್ತೇನ ಹಾಗೂ ನೈಜರ್ ಮೊದಲುಗೊಂಡು ಅನೇಕ ದೇಶಗಳಿರುವವು. ಈ ಶ್ರೇಣಿಯು ಭಾರತಕ್ಕೆ ಅನೇಕ ವಿಷಯಗಳಲ್ಲಿ ತನ್ನನ್ನು ಸುಧಾರಿಸುವದರಲ್ಲಿ ಗಮನಹರಿಸುವಂತೆ ಹಾಗೂ ನಾಗರೀಕರ ಶ್ರೇಯಸ್ಸಿನ ಬಗ್ಗೆ ಯೋಚಿಸಬೇಕೆಂದು ತಿಳಿಸುವದು. ಭಾರತದ ನೆರೆಯ ರಾಜ್ಯವಾದ ಚೀನಾ 60ನೇ ಸ್ಥಾನದಲ್ಲಿದ್ದರೆ, ನೇಪಾಳ (93), ಪಾಕಿಸ್ತಾನ (108), ಮೈನ್‌ಮಾರ (118), ಶ್ರೀಲಂಕಾ (128), ಬಾಂಗ್ಲಾದೇಶ (129), ಸ್ಥಾನದಲ್ಲಿರುವವು. ಭಾರತವು ಜಾಗತಿಕವಾಗಿ 60 ವರ್ಷ ಮೇಲ್ಪಟ್ಟವರ ಸಂಖ್ಯೆಯಲ್ಲಿ ಎರಡನೇ ಹೆಚ್ಚಿನ ಸಂಖ್ಯೆಯನ್ನು ಅಂದರೆ 140 ಮಿಲಿಯನ್ (ಹದಿನಾಲ್ಕು ಕೋಟಿ) ಹಿರಿಯ ನಾಗರೀಕರನ್ನು ಹೊಂದಿರುವದು.

- ಸಂಯುಕ್ತ ರಾಷ್ಟ್ರಗಳ ವರದಿಯ ಪ್ರಕಾರ ಪ್ರಪಂಚದಲ್ಲಿ ಎರಡು ಬಿಲಿಯನ್ ಜನರು ಅಂದರೆ ಎರಡು ಶತಕೋಟಿ ಜನರು ಕುಡಿಯು ನೀರಿನ ಕೊರತೆಯನ್ನು ಎದುರಿಸುತ್ತಿರುವರು. ಅದಕ್ಕೆ ಅನುಸರಿಸಿ, ಕಲುಷಿತ ನೀರಿನ, ನೈರ್ಮಲ್ಯ ಹೀನ, ಅನಾರೋಗ್ಯಗಳ ಕಾರಣ ಪ್ರತಿ ವರ್ಷವೂ 74 ಮಿಲಿಯನ್ ಅಂದರೆ ಏಳುಕೋಟಿ ನಾಲ್ವತ್ತು ಲಕ್ಷ ಜನರ ಆಯಸ್ಸು ಕಡಿಮೆಯಾಗುತ್ತಿರುವದು ಹಾಗೂ 1.5 ಮಿಲಿಯನ್ ಜನರು ಅಂತರೆ ಹತ್ತು ಲಕ್ಷ ನಾಲ್ವತ್ತು ಸಾವಿರ ಜನರು ಪ್ರಾಣ ಕಳೆದುಕೊಳ್ಳುತ್ತಿರುವರು.

## State Promotional Workers, Place & Contact Numbers

| | |
|---|---|
| **Rev. M. Bhadrinath** | State Coordinator |
| Cell : | 9901958884 |
| **Rev. Dr. Nohan Raj** | Bangaluru |
| Cell : | 9880329789 |
| **Pastor A.N. Elisha** | Bangaluru |
| Cell : | 9740849557 |
| **Mr. Vijaya Kumar M.** | Bangaluru |
| Cell : | 9341073508 |
| **Mr. Gabriel** | Bangaluru |
| Cell : | 9448559300 |
| **Rev. Anandappa** | Bangaluru |
| Cell : | 9972425477 |
| **Mr. Raju. N** | Bangaluru |
| Cell : | 9632288011 |
| **Mr. Harshath Kumar** | B'luru Rural & Tumkur |
| Cell : | 6362708520 |
| **Mr. Stephen (Muruga)** | Bangaluru |
| Cell : | 9731182148 |
| **Rev. Daniel Joseph** | Bidar |
| Cell : | 9980391205 |
| **Mr. Y.C. Peter** | Kalaburgi |
| Cell : | 7899957900 |
| **Mr. Basavaraj. B** | Bellary |
| Cell : | 9901109625 |
| **Mr. Raju S.** | Rayachuru |
| Cell : | 8123522508 |
| **Mr. Suresh** | Hubballi |
| Cell : | 9686523038 |
| **Mr. Raju Mark** | Belagavi |
| Cell : | 6363318629 |
| **Mr. Bharath Kumar** | Davanagere |
| Cell : | 9916413901 |
| **Rev. Joseph Ravikumar** | Mysuru |
| Cell : | 9980353736 |
| **Rev. Emmanuel Sampath** | Mandya |
| Cell : | 9591867967 |

# ಮೌಲ್ಯಮಾಪನ ಮತ್ತು ಯೋಜನೆಯ ಶಿಬಿರಗಳು



ರಾಷ್ಟ್ರವ್ಯಾಪಿ 10 ಕೇಂದ್ರಗಳಲ್ಲಿ ಏರ್ಪಡಿಸಿದ್ದ ಮೌಲ್ಯಮಾಪನ ಶಿಬಿರಗಳು ರಾಷ್ಟ್ರದಾದ್ಯಂತ ಇರುವ ವಿಶ್ವವಾಣಿಯ ಸೇವಕರನ್ನು ಕರ್ತನ ಕೃಪೆಯಿಂದ ಬಲಪಡಿಸಿದವು. ದರ್ಶನದ ಮಾರ್ಗದಲ್ಲಿ ಮುನ್ನಡೆಯಲು ಪ್ರಾರ್ಥನಾ ಸಮಯವು ಪ್ರಭಾವವನ್ನುಂಟು ಮಾಡಿತು. ಮುಂದಿನ 6 ತಿಂಗಳುಗಳಿಗಾಗಿ ರೂಪಿಸಿದ ವಿಶ್ವಾಸದ ಸೇವಾ ಯೋಜನೆಯಲ್ಲಿ ಕ್ರಿಸ್ತನ ನಿರೀಕ್ಷೆಯ ಕಿರಣಗಳು ಕಂಡುಬಂದವು. ಕರ್ತನಿಗೆ ಸ್ತೋತ್ರಗಳು.



ಲುಧಿಯಾನಾ (ಉತ್ತರ ಭಾರತ), 3-5 ಏಪ್ರಿಲ್ 2024



ಕೊಚ್ಚಿನ್ (ತಮಿಳುನಾಡು ಮತ್ತು ಕೇರಳ), 3-5 ಏಪ್ರಿಲ್ 2024



ಬೆಂಗಳೂರು (ಕರ್ನಾಟಕ), 3-4 ಏಪ್ರಿಲ್ 2024



ವಿಜಯವಾಡ (ಕೇಂದ್ರ ಆ.ಪ್ರ.), 3-4 ಏಪ್ರಿಲ್ 2024



ಲಗಢವಾಲ (ಮಹಾರಾಷ್ಟ್ರ & ಗುಜರಾತ), 4-5 ಏಪ್ರಿಲ್ 2024



ಹಣಮಕೊಂಡ (ಉತ್ತರ ತೆಲಂಗಾಣ), 5-6 ಏಪ್ರಿಲ್ 2024



ತರಂಗಾಡ (ಪಶ್ಚಿಮ ಬಂಗಾಳ & ಒಡಿಷಾ), 4-6 ಏಪ್ರಿಲ್ 2024




ಕಡಪ (ದಕ್ಷಿಣ ಆ.ಪ್ರ.), 6-7 ಏಪ್ರಿಲ್ 2024



ಸಿಲಿಗುರಿ (ಈಶಾನ್ಯ ಭಾರತ), 6-8 ಏಪ್ರಿಲ್ 2024



ಹೈದರಾಬಾದ (ದಕ್ಷಿಣ ತೆಲಂಗಾಣ), 8-9 ಏಪ್ರಿಲ್ 2024

RNI REGD. No. RN. AP KAN/2000/1565 | POSTAL REGD. No. HQ/SD/314/2024-2026 - KANNADA | DATE OF PUBLICATION 20.04.2024
LICENSED TO POST WITHOUT PREPAYMENT - PMG/TS/HQR/SC-02/WPP/2024-2026

**Return Requested: VISHWAVANI SAMARPAN,
1-10-28/247, Anandapuram,
ECIL Post, Hyderabad - 500 062.**

## ಕಣ್ಣೀರಿನಿಂದ ಬಿತ್ತುವವರು ಖಂಡಿತವಾಗಿಯೂ ಸಂತೋಷದಿಂದ ಕೊಯ್ಯುವರು. ಬೆಳೆಯುವಂತೆ ಮಾಡುವವನ ಮೂಲಕ ಇದು ಸಾಧ್ಯವಾಗುವದು. ಹಲ್ಲೇಲೂಯ.




**ಬಘುವಾಪಾಲ್, ಒಡಿಶಾ – 15.03.2024**




**ಲೋಗಿಲಿ, ಆ.ಪ್ರ. – 18.03.2024**



**ಪೊನುಗಾಡು, ತೆಲಂಗಾಣ – 20.03.2024**




**ಎಲುಮೇಟ, ಒಡಿಶಾ – 23.03.2024**




**ಸಾಯಿದಾನಿಪಾಡ, ಮಹಾರಾಷ್ಟ್ರ – 23.03.2024**




**ವೈ. ಶ್ರೀರಾಮಪುರಂ, ಆ.ಪ್ರ. – 24.03.2024**




**ಡೊಕ್ರಿಪೊದೊರ, ಒಡಿಶಾ – 24.03.2024**




**ನಾಗಮ್ಮಗುಡ, ಆ.ಪ್ರ. – 24.03.2024**




**ಗುಲ್ತಾರೆ, ಮಹಾರಾಷ್ಟ್ರ – 30.03.2024**




**ಗಡಿಪಲ್ಲಿವಲಸ, ಆ.ಪ್ರ. – 30.03.2024**




**ಸೂರ್ಯನಗರಮ್, ಆ.ಪ್ರ. – 31.03.2024**




**ತೊಟ್ಟಾಡಿ, ಆ.ಪ್ರ. – 31.03.2024**

**VISHWA VANI SAMARPAN - <KANNADA> LANGUAGE**
Printed and Published by P. Selvaraj on behalf of VISHWA VANI, a registered society ( Regn. No.17871 of 1987) and printed at CAXTON Offset Pvt. Ltd., 11-5-416/3, Red Hills, HYD-04. and published at 1-10-28/247, Anandapuram, ECIL Post, HYD-62. **POSTING DATE: 24.04.2024.** EDITOR: P. SELVARAJ.